# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ –02 ಸಂಚಿಕೆ –253 | ಆರ್ಎನ್ಐ ನಂ: ಕೆಎಆರ್ಕೆಎಎನ್/2023/88462 | ಕೆಎ/ಎಸ್ಕೆ/ಸಿಟಿಎ–874/2024–2026 | ಚಿತ್ರದುರ್ಗ | ದಿನಾಂಕ:01–05–2025 ಗುರುವಾರ | ಪುಟ: 4 | ಬೆಲೆ : ರೂ.2–00
Volume - 02 Issue - 253 | RNI No: KARKAN/2023/88462 | KA/SK/CTA-874/2024-2026 | Chitradurga | Date: 01-05-2025 Thursday | Page: 4 | Price: Rs. 2-00



**ಒಳಪುಟದ ಸುದ್ದಿಗಳು**

ಬಸವಾದಿ ಶರಣರ ತತ್ವಗಳನ್ನು ಅನುಸರಿಸಿ ನಿಸ್ವಾರ್ಥ ಜಗತ್ತು ಸೃಷ್ಟಿಯಾಗಲಿ: ಸ್ವಾಮೀಜಿ 2

ಜಗತ್ತಿನಲ್ಲಿನ ಅಸಮಾನತೆಯ ಕಗ್ಗತ್ತಲನ್ನು ಹೊಡೆದೋಡಿಸಿದ್ದ ವಿಶ್ವಗುರು ಬಸವಣ್ಣ 3


ಕಾರ್ಮಿಕ ದಿನಾಚರಣೆಯ ಸೂಕ್ತತೆ: ಒಂದು ಅವಲೋಕನ 4



ಸುದ್ದಿ, ಜಾಹಿರಾತಿಗೆ 9686622252


## ಫಾಸ್ಟ್ ನ್ಯೂಸ್

### ಸಂಭ್ರಮದ ಲಕ್ಕಿಹಳ್ಳಿ ಕಣಿವೆಮಾರಮ್ಮ ದೇವಿಗೆ ಮದಲಿಂಗಿತ್ತಿ ಶಾಸ್ತ್ರ



» **ಹೊಸದುರ್ಗ**

ತಾಲ್ಲೂಕಿನ ಲಕ್ಕಿಹಳ್ಳಿ ಗ್ರಾಮದ ಅಧಿದೇವತೆ, ಶಕ್ತಿದೇವತೆ ಶ್ರೀ ಕಣಿವೆಮಾರಮ್ಮ ದೇವಿಯ ಮಾದಲಿಂಗಿತ್ತಿ ಶಾಸ್ತ್ರ ಧಾರ್ಮಿಕ ಸಂಪ್ರಾಯದಂತೆ ಪ್ರತಿವರ್ಷದಂತೆ ಮಂಗಳವಾರ ಸಂಜೆ ಸಾವಿರಾರು ಭಕ್ತರ ಸಮ್ಮುಖದಲ್ಲಿ ಸಂಭ್ರಮ–ಸಡಗರದಿಂದ ನಡೆಯಿತು. ಗ್ರಾಮದ ಶ್ರೀ ದಾರಮಾದಲಿಂಗೇಶ್ವರ ಸ್ವಾಮಿಯ ಹೊರಮಠದ ಸಮೀಪವಿರುವ ಏಳುಮಂದಿ ಅಕ್ಕ–ತಂಗಿಯರ ಬಾವಿಯಲ್ಲಿ ಸೋಮವಾರ ಅಮ್ಮನವರ ಗಂಗಾಪೂಜೆ ನೆರವೇರಿಸಲಾಯಿತು, ನಂತರ ಗ್ರಾಮದ ರಾಜಬೀದಿಯಲ್ಲಿ ದೇವಿಯ ಮದಾಲ್ದೆ ನಡೆಯಿತು. ಮಂಗಳವಾರ ಸಂಜೆ ಗ್ರಾಮದ ಗೌಡರು ತಮ್ಮ ಪ್ರತೀತಿ ಮತ್ತು ಸಂಪ್ರದಾಯದಂತೆ ಅಮ್ಮನವರ ಮದಲಿಂಗಿತ್ತಿ ಶಾಸ್ತ್ರ ನಡೆಸಿದರು. ಈ ವೇಳೆ ಗ್ರಾಮದ ಕೆಲ ಮಹಿಳೆಯರು ಅಮ್ಮನವರ ಕುರಿತಾದ ಜಾನಪದ ಪದವನ್ನು ಹೇಳಿದರು, ಭಕ್ತರು ದೇವಿಗೆ ಪೂಜೆ ಸಲ್ಲಿಸಿ ಭಕ್ತಿ ಸಮರ್ಪಿಸಿದರು. ನಂತರ ಶ್ರೀ ಮುದ್ದುಲಿಂಗೇಶ್ವರ ಕೃಪಾಪೋಷಿತ ನಾಟಕ ಮಂಡಳಿ ವತಿಯಿಂದ ಶ್ರೀ ದೇವಿ ಮಹಾತ್ಮೆ ಅರ್ಥಾತ್ ಮಹಿಷಾಸುರ ಮರ್ಧಿನಿ ಹಾಗೂ ಶುಂಭ–ನಿಶುಂಭರ ವಧೆ ಎಂಬ ಪುರಾಣ ಆಧರಿತ ಯಕ್ಷಗಾನ ನಾಟಕ ಪ್ರದರ್ಶನಗೊಂಡಿತು. ಅಮ್ಮನವರ ಜಾತ್ರಾ ಮಹೋತ್ಸವದ ನಿಮಿತ್ತವಾಗಿ ಗ್ರಾಮದ ಪ್ರಮುಖ ಬೀದಿಗಳನ್ನು ವಿದ್ಯುತ್ ದೀಪಗಳಿಂದ ಹಸಿರು ತಳಿರು–ತೋರಣಗಳಿಂದ ಸಿಂಗರಿಸಲಾಗಿದ್ದು, ದೇವಾಲಯವನ್ನು ಬಗೆ ಬಗೆಯ ಬಣ್ಣದ ಹೂಗಳಿಂದ ಅಲಂಕರಿಸಲಾಗಿತ್ತು.

### ಮೇ 4, 5, 6, ರಂದು ರಾಜ್ಯಮಟ್ಟದ ಮಕ್ಕಳ ಸಾಹಿತ್ಯ ಸಂಸ್ಕೃತಿ ಕಮ್ಮಟ

» **ಚಿತ್ರದುರ್ಗ**

ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ (ರಿ.), ತರಳಬಾಳು ಜಗದ್ಗುರು ಶಾಖಾ ಮಠ, ಸಾಣೆಹಳ್ಳಿ ಹಾಗೂ ಚಿತ್ರದುರ್ಗ ಜಿಲ್ಲಾ ಮಕ್ಕಳ ಸಾಹಿತ್ಯ ಪರಿಷತ್ತು ಇವರ ಸಹಯೋಗದಲ್ಲಿ, ರಾಜ್ಯಮಟ್ಟದ ಮಕ್ಕಳ ಸಾಹಿತ್ಯ ಸಂಸ್ಕೃತಿ ಕಮ್ಮಟವು ದಿನಾಂಕ 4.05.2025 ರಿಂದ 6.5.2025 ವರೆಗೆ ಮೂರು ದಿನಗಳು ವಿವಿಧ ವೈವಿಧ್ಯಮಯ ಕಾರ್ಯಕ್ರಮ ಜರುಗುತ್ತವೆ. ಅನುಭವಿ ತಜ್ಞರು ಕಮ್ಮಟದ ನೇತೃತ್ವವಹಿಸುತ್ತಿದ್ದು ಈ ಕಮ್ಮಟದಲ್ಲಿ, ಕವನ ರಚನೆ ಕಥೆ ಹೇಳುವುದು. ನಾಟಕ ಚಿತ್ರಕಲೆ ಹಸೆ ಚಿತ್ತಾರ ಸಂಗೀತ ಯಕ್ಷಗಾನ ಮೂಲ ಜಾನಪದ ನೃತ್ಯ ಕಲೆಗಳ ಬಗ್ಗೆ ಉಚಿತ ತರಬೇತಿ ನೀಡಲಾಗುವುದು. ಊಟ ಹಾಗೂ ವಸತಿ ಸೌಲಭ್ಯವನ್ನು ಉಚಿತವಾಗಿ ನೀಡುತ್ತಿದ್ದು, ಊಟಕ್ಕೆ ತಟ್ಟೆ ಲೋಟ, ಮಲಗಲು ಜಮಖಾನವನ್ನು ತರುವುದು ಹಾಗೂ ಪ್ರಯಾಣ ಭತ್ಯೆ ನೀಡುವುದಿಲ್ಲ. ಈ ಕಾರ್ಯಕ್ರಮಕ್ಕೆ ನಮ್ಮ ಚಿತ್ರದುರ್ಗ ಜಿಲ್ಲೆಯ ವತಿಯಿಂದ 25 ವಿದ್ಯಾರ್ಥಿಗಳು ಭಾಗವಹಿಸಲು ಅವಕಾಶವಿರುತ್ತದೆ. ಆಸಕ್ತ ಮಕ್ಕಳು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಕೋರಲಾಗಿದೆ. ಆಸಕ್ತ ವಿದ್ಯಾರ್ಥಿಗಳು ನೋಂದಾಯಿಸಿಕೊಳ್ಳಲು ಯೋಗೀಶ್ ಸಹ್ಯಾದ್ರಿ, ಅಧ್ಯಕ್ಷರು, ಜಿಲ್ಲಾ ಮಕ್ಕಳ ಸಾಹಿತ್ಯ ಪರಿಷತ್ತು, ಚಿತ್ರದುರ್ಗ. ಮೊ : 9972240239. ಮಾರುತಿ ನಾಯ್ಕ್, ಪ್ರಧಾನ ಕಾರ್ಯದರ್ಶಿ. ಮ. ಸಾ. ಪ. ಚಿತ್ರದುರ್ಗ ಮೊ : 99863 36164. ವಿಜಯ್ ಕುಮಾರ್ ಬಿ. ಉಪಾಧ್ಯಕ್ಷರು. ಮ. ಸಾ. ಪ, ಚಿತ್ರದುರ್ಗ.* ಮೊ : 96867 24546. ಹಾಲೇಶ್ ಸಿ.ಜಿ, ಸಂಘಟನಾ ಕಾರ್ಯದರ್ಶಿ, ಮ.ಸಾ.ಪ, ಚಿತ್ರದುರ್ಗ ಮೊ : 77609 32325. ಸಂಪರ್ಕ ಮಾಡಬಹುದಾಗಿದೆ ಮೊದಲು ಕರೆ ಮಾಡಿದವರಿಗೆ ಆದ್ಯತೆ ನೀಡಲಾಗುವುದು.

### ಜ್ಞಾನಜ್ಯೋತಿ ಬಸವಣ್ಣನವರು ಧಾರ್ಮಿಕ ಪರಂಪರೆಯ ಪರಿವರ್ತನೆಯ ಕೇಂದ್ರ ಬಿಂದು

# ಬಸವಣ್ಣನವರ ತತ್ವಗಳಿಂದ ಸಮಾಜದಲ್ಲಿ ಸಾಮರಸ್ಯತೆ : ಶಾಸಕ ಟಿ.ರಘುಮೂರ್ತಿ

» **ಚಳ್ಳಕೆರೆ**

ರಾಜ್ಯದ ಇತಿಹಾಸದಲ್ಲಿ 12ನೇಶತಮಾನ ಧಾರ್ಮಿಕ ಪರಂಪರೆ ಮತ್ತು ಮೌಲ್ಯವನ್ನು ಸಂರಕ್ಷಿಸಿಕ ಕಾಲವಾಗಿದೆ. ಸಮಾಜದ ಪರಿವರ್ತನೆಗಾಗಿ ಸಮಾಜದಲ್ಲಿ ಆಳಾವಾಗಿ ಬೇರೂರಿದ್ದ ಜಾತಿವೈಶ್ಯಮಗಳ ಮಧ್ಯೆ ಸಮಾನತೆ ಸಾರಲು ಮತ್ತು ಧಾರ್ಮಿಕ ವಿಚಾರಧಾರೆಗಳ ಜಾಗೃತಿ ಮೂಡಿಸುವ ಅವಶ್ಯಕತೆ ಇತ್ತು. ಇಂತಹ ಸಂದರ್ಭದಲ್ಲೇ ಜಗಜ್ಯೋತಿ ಬಸವೇಶ್ವರರು ತಮ್ಮದೇಯಾದ ಜ್ಞಾನ ಶಕ್ತಿಯಿಂದ ಅಜ್ಞಾನದ ಕತ್ತಲನ್ನು ಹೋಗಲಾಡಿಸಿ ಎಲ್ಲರಲ್ಲೂ ಧಾರ್ಮಿಕ ಜಾಗೃತಿ ಮೂಡಿಸುವ ಕಾರ್ಯಕ್ಕೆ ಮುನ್ನುಡಿ ಬರೆದರು ಎಂದು ಕ್ಷೇತ್ರದ ಶಾಸಕ, ಸಣ್ಣಕೈಗಾರಿಕೆ ಅಭಿವೃದ್ದಿಮಂಡಳಿ ಅಧ್ಯಕ್ಷ ಟಿ.ರಘುಮೂರ್ತಿ ತಿಳಿಸಿದರು.

ಅವರು, ಬುಧವಾರ ನಗರದ ವೀರಶೈವ ಕಲ್ಯಾಣಮಂಟಪದಲ್ಲಿ ತಾಲ್ಲೂಕು ವೀರಶೈವ ಲಿಂಗಾಯಿತ ಸಂಘಟನೆಗಳ ಒಕ್ಕೂಟ, ಗ್ರಾಮಾಂತರ ವೀರಶೈವ ಲಿಂಗಾಯಿತ ಸಂಘಗಳ ಒಕ್ಕೂಟ, ವೀರಶೈವ ಮಹಿಳಾ ಸಮಾಜ ಸೇವಾ ಸಂಘ, ನಗರ ವೀರಶೈವ ಸಂಘ, ಲಿಂಗಾಯಿತನೌಕರರ ಸಂಘ, ಯುವಘಟಕ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಬಸವೇಶ್ವರರ 894ನೇ ಜಯಂತ್ಯೋತ್ಸವ ಕಾರ್ಯಕ್ರಮವನ್ನು ಜ್ಯೋತಿ ಬೆಳಗುವ ಮೂಲಕ ಉದ್ಘಾಟಿಸಿ ಮಾತನಾಡಿದರು.







ಜಗಜ್ಯೋತಿ ಬಸವೇಶ್ವರರು ಇಡೀ ಸಮಾಜವನ್ನು ಒಂದಾಗಿ ಪರಿಗಣಿಸಿ ಅದರಲ್ಲಿದ್ದ ಜಾತಿಪಂಥಗಳಿಗೆ ತಮ್ಮದೇಯಾದ ವಚನಗಳ ಮೂಲಕ ಬದಲಾವಣೆಯ ಗಾಳಿ ಬೀಸುವಂತೆ ಮಾಡಿದರು. ಬಸವಣ್ಣನವರ ಎಲ್ಲಾ ವಚನಗಳಲ್ಲೂ ಬದುಕಿನ ನೈತಿಕತೆ, ವಾಸ್ತವ್ಯವನ್ನು ಅರಿಯಬಹುದಿತ್ತು. ಪ್ರತಿಯೊಬ್ಬ ವ್ಯಕ್ತಿಯೂ ಸಮಾಜದಲ್ಲಿ ಉತ್ತಮ ಬದುಕು ರೂಪಿಸಿಕೊಳ್ಳಲು ಜಗಜ್ಯೋತಿ ಬಸವಣ್ಣನವರ ವಚನಗಳು ಪ್ರೇರಣಾ ಶಕ್ತಿಯಾಗಿದ್ದವು ಎಂದರು.

ಉಪನ್ಯಾಸ ನೀಡಿದ ಕನ್ನಡ ಅಧ್ಯಾಪಕ ನಾಗರಾಜಸಿರಿಗೆರೆ, ಜಗಜ್ಯೋತಿ ಬಸವಣ್ಣ ಧಾರ್ಮಿಕ ಭಾವನೆಗಳಿಗೆ ಗೌರವವನ್ನು ಮೂಡಿಸುವಂತಹ ಶಕ್ತಿಯನ್ನು ಹೊಂದಿದ್ದರು. ಬಸವಣ್ಣನವರ ತತ್ವ, ಸಿದ್ದಾಂತಗಳಿಗೆ ವಿಶೇಷ ಬೆಲೆಗೌರವವನ್ನು ಸಮಾಜ ನೀಡುತ್ತಾ ಬಂತು. ಜಗಜ್ಯೋತಿ ಬಸವಣ್ಣನವರು ಧಾರ್ಮಿಕ ಶಕ್ತಿಯಾಗಿ ಹೊರಹೊಮ್ಮಿದವರು. ಅವರ ತತ್ವ, ಸಿದ್ದಾಂತಗಳು ಪ್ರತಿಯೊಬ್ಬರ ಬದುಕಿಗೂ ಆಧಾರಸ್ತಂಭವಾಗಿವೆ ಎಂದರು.

ಕಾರ್ಯಕ್ರಮದ ದಿವ್ಯಸಾನಿಧ್ಯ ವಹಿಸಿದ್ದ ಕೊಟ್ಟೂರು ಜಗದ್ಗುರು ಶಂಕರಮಹಾಸ್ವಾಮಿ ಮಹಾಸಂಸ್ಥಾನದ ಸೋಮಶಂಕರಮಹಾಸ್ವಾಮಿ ಮಾತನಾಡಿ, ಇಂದು ವೀರಶೈವ ಸಮಾಜ ವಿಶ್ವಾಸ, ಗೌರವ, ಹೆಮ್ಮೆಯಿಂದ ಬದುಕನ್ನು ಹಂಚಿಕೊಂಡಿದ್ದು, ಅದಕ್ಕೆ ಮೂಲ ಪ್ರೇರಣೆ ಜಗಜ್ಯೋತಿಬಸವಣ್ಣನವರುಬಸವಣ್ಣನವರ ಕಾಲದಲ್ಲಿ ಅನೇಕ ತತ್ವಜ್ಞಾನಿಗಳು ಸಮಾಜದ ಪರಿವರ್ತನೆಗಾಗಿ ಚಿಂತನೆ ನಡೆಸಿದವರು. ಅದಕ್ಕೆಲ್ಲಾ ಮೂಲಪ್ರೇರಣೆ ಬಸವಣ್ಣನವರು. ಸಮಾಜದ ವಾಸ್ತವ ಪರಿಸ್ಥಿತಿಗಳ ಬಗ್ಗೆ ಅಧ್ಯಯನ ನಡೆಸಿ ಮಾರ್ಗದರ್ಶನ ನೀಡುತ್ತಿದ್ದರು. ಬಸವಣ್ಣನವರನ್ನು ನಾವು ಸದಾಕಾಲ ನೆನೆದು ಮುನ್ನಡೆದರೆ ಮಾತ್ರ ಯಶಸ್ಸು ಸಾಧ್ಯವೆಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವೀರಶೈವ ಸಮಾಜದ ಸೇವಾ ಸಂಘದ ಅಧ್ಯಕ್ಷ ಕೆ.ಸಿ.ನಾಗರಾಜು ವಹಿಸಿದ್ದರು. ತಹಶೀಲ್ದಾರ್ ರೇಹಾನ್‌ಪಾಷ, ಇಒ ಶಶಿಧರ, ಬಿಇಒ ಕೆ.ಎಸ್.ಸುರೇಶ್, ನಗರಸಭೆ ಅಧ್ಯಕ್ಷೆ ಮಂಜುಳಾ, ಉಪಾಧ್ಯಕ್ಷೆ ಸುಮ, ಸದಸ್ಯರಾದ ಶಿಲ್ಪ, ರಮೇಶ್‌ಗೌಡ, ಸಮಾಜದಮುಖಂಡರಾದಟಿ.ಪ್ರಭುದೇವ್, ಎಚ್.ವಿ.ನಾಗರಾಜು, ಎ.ಮಂಜುನಾಥ, ಕೆ.ಎಂ.ನಟರಾಜ್, ಟಿ.ಆರ್.ಕಿರಣ್‌ಶಂಕರ್, ಎನ್.ಸತೀಶ್‌ಬಾಬು, ಎಸ್.ಜಯಪ್ರಕಾಶ್, ಕೆ.ಎಂ.ಅರವಿಂದ್, ಟಿ.ಕಿರಣ್‌ಶಂಕರ್, ಆರ್.ಜಗದೀಶ್, ವಿಶ್ವನಾಥ, ಡಾ.ಕೆ. ಎಂ.ಜಯಕುಮಾರ್,ಮಧುರ,ಮಂಜುಳಾ, ಅನ್ನಪೂರ್ಣ, ಪದ್ಮ, ಕಾರ್ಯದರ್ಶಿ ಎಚ್.ವಿ. ಪ್ರಸನ್ನಕುಮಾರ್, ಉಪಾಧ್ಯಕ್ಷ ಎ.ವಿಜಯೇಂದ್ರ, ಕೆ.ಎಂ.ಜಗದೀಶ್, ನಿರ್ದೇಶಕರಾದ ಎನ್.ಎಚ್.ವಾಸುದೇವ, ಕೆ.ಎಂ.ಕೊಟ್ರೇಶ್, ಮಾತೃಶ್ರೀಎನ್. ಮಂಜುನಾಥ, ಕೆ.ಪಿ.ಲೋಕೇಶ್ ಮುಂತಾದವರು ಉಪಸ್ಥಿತರಿದ್ದರು.

## ಪ್ರಮುಖ ಸುದ್ದಿ

### ಸಾಂಸ್ಕೃತಿಕ ನಾಯಕ ಬಸವೇಶ್ವರ ಜಯಂತಿ –ಸಿಇಓ ಎಸ್.ಜೆ.ಸೋಮಶೇಖರ್ ಅಭಿಮತ

# ಜಾತಿ, ವರ್ಣ, ಲಿಂಗಭೇದ ವಿರೋಧಿಸಿದ ಬಸವಣ್ಣ

» **ಚಿತ್ರದುರ್ಗ**

ಜಾತಿ, ವರ್ಣ ಹಾಗೂ ಲಿಂಗಭೇದಗಳನ್ನು 900 ವರ್ಷಗಳ ಹಿಂದೆಯೇ ವಿರೋಧಿಸಿದ್ದ ಬಸವಣ್ಣನವರ ಆಲೋಚನೆಗಳು ಕಾಂತ್ರಿಕಾರಿಯಾಗಿದ್ದವು ಎಂದು ಜಿ.ಪಂ. ಸಿಇಓ ಎಸ್.ಜೆ.ಸೋಮಶೇಖರ್ ಅಭಿಪ್ರಾಯ ವ್ಯಕ್ತಪಡಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಸಹಯೋಗದಲ್ಲಿ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾದ ಸಾಂಸ್ಕೃತಿಕ ನಾಯಕ ಬಸವೇಶ್ವರರ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ನೆರವೇರಿಸಿ ಅವರು ಮಾತನಾಡಿದರು.

ಬಸವಣ್ಣವರ ವಚನಗಳು ಇಂದಿಗೂ ಪ್ರಸ್ತುತವಾಗಿವೆ. ಬಸವಣ್ಣ ಸ್ಥಾಪಿಸಿದ ಅನುಭವ ಮಂಟಪ ಮತ್ತು ಶರಣ ಶರಣೆಯರ ಸಮಾಜದಲ್ಲಿ ಎಲ್ಲಾ ವರ್ಗದ ಜನಗರಿಗೂ ಪ್ರಾತಿನಿಧ್ಯವಿತ್ತು ಇವತ್ತಿನ ಸಂಸತ್ತಿನ ಮಾದರಿಯಲ್ಲಿಯೇ ಅಂದಿನ ಅನುಭವ ಮಂಟಪ ಧಾರ್ಮಿಕ ಹಾಗೂ ಸಾಮಾಜಿಕ ಸುಧಾರಣೆಗಳಿಗೆ ದಾರಿ ದೀಪವಾಗಿತ್ತು. ಜಗತ್ತು ಇರುವವರೆಗೂ ಬಸವಣ್ಣನವರ ತತ್ವ, ಸಿದ್ಧಾಂತ ಹಾಗೂ ವಿಚಾರಗಳು ಪ್ರಸ್ತುವಾಗುತ್ತವೆ ಎಂದು ಎಸ್.ಜೆ.ಸೋಮಶೇಖರ್ ಹೇಳಿದರು.

ಸರ್ಕಾರ ವೀರಶೈವ ಅಭಿವೃದ್ಧಿ ನಿಗಮ ಸ್ಥಾಪಿಸಿ, ಆರ್ಥಿಕವಾಗಿ ಹಿಂದುಳಿದವರಿಗೆ ಸಹಾಯ ಒದಗಿಸುತ್ತಿದೆ. ಅಧಿಕಾರಿಗಳು ಈ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ವಿಶ್ವಕ್ಕೆ ಬಸವಣ್ಣನವರ ಚಿಂತನೆಗಳನ್ನು ಪಸರಿಸುವ ದೃಷ್ಟಿಯಿಂದ ಅಂತರಾಷ್ಟ್ರೀಯ ಆಧ್ಯಾತ್ಮಿಕ ಕೇಂದ್ರ ಸ್ಥಾಪನೆಯಾಗಬೇಕು. ಶರಣ ಸಾಹಿತ್ಯದ ಅಪ್ರಕಟಿತ ವಚನಗಳ ಪ್ರಕಟಣೆಯಾಗಿ ಪ್ರಚುರವಾಬೇಕು. ಈ ಕುರಿತು ಹೆಚ್ಚಿನ ಸಂಶೋಧನೆಗಳ ಅಗತ್ಯವಿದೆ ಎಂದು ಎಸ್. ಜೆ.ಸೋಮಶೇಖರ್ ಅವರು ಅಭಿಪ್ರಾಯ ವ್ಯಕ್ತಪಡಿಸಿದರು.



ಅಪರಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಮಾತನಾಡಿ, ಪ್ರತಿಯೊಬ್ಬರೂ ತಮ್ಮ ಮನಗಳಲ್ಲಿ ಬಸವಣ್ಣನವರ ತತ್ವಗಳನ್ನು ಅನಾವರಣ ಮಾಡಿಕೊಳ್ಳಬೇಕು. ಆಗ ಮಾತ್ರಸಮಸಮಾಜನಿರ್ಮಾಣವಾಗುತ್ತದೆ. ಬಸವಣ್ಣವರ ತತ್ವದಲ್ಲಿ ಕಾಯಕ ಹಾಗೂ ದಾಸೋಹಕ್ಕೆ ಹೆಚ್ಚಿನ ಮಹತ್ವವಿದೆ. ಕಾಯಕ ಎನ್ನುವುದು ಸಂಪತ್ತಿನ ಉತ್ಪಾದಕತೆಯಾದರೆ, ದಾಸೋಹ ಎನ್ನುವುದು ಉತ್ಪಾದನೆಯಾದ ಸಂಪತ್ತಿನ ಸಮಾನ ಹಂಚಿಕೆಯ ತತ್ವವಾಗಿದೆ. ಬಸವಣ್ಣನವರ ನಡೆ ಹಾಗೂ ನುಡಿಯಲ್ಲಿ ಅಂತರವಿರಲಿಲ್ಲ. ನಡೆದ ಹಾಗೆಯೇ ನುಡಿದರು, ನುಡಿದ ಹಾಗೆಯೇ ಬದುಕಿದರು ಎಂದರು.

ಇಂದಿಗೂ ಸಮಾಜದಲ್ಲಿ ಜಾತಿ ವ್ಯವಸ್ಥೆ ಬದಲಾಗಿಲ್ಲ. ಇದಕ್ಕೆ ವೀರಶೈವ ಸಮಾಜವೂ ಹೊರತಾಗಿಲ್ಲ. ಸಾದರು, ಬಣಜಿಗರು, ಪಂಚಮಸಾಲಿಗಳು, ಗಾಣಿಕರಾ, ಹೀಗೆ ವಿವಿಧತೆಯಿಂದ ನೋಡುವ ಪರಿಸ್ಥಿತಿಯಿದೆ. ಇಂತಹ ಜಾತಿ ಸಂಕೋಲೆಗಳಿಂದ ಎಲ್ಲರೂ ಹೊರಬರಬೇಕು. ಎಲ್ಲ ಜಾತಿ ಹಾಗೂ ಧರ್ಮಗಳ ಜನರನ್ನು ಎಲ್ಲರೂ ಒಪ್ಪಿಗೊಂಡಾಗಲೇ ಸಮಾಜದಲ್ಲಿ ಆರೋಗ್ಯಕರ ವಾತಾವರಣ ಮೂಡಲು ಸಾಧ್ಯ. ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪದಲ್ಲಿ ಆಯ್ದಕ್ಕಿ ಲಕ್ಕಯ್ಯ, ಡೋಹಾರ ಕಕ್ಕಯ್ಯ, ಮಾದಾರ ಚನ್ನಯ್ಯ, ಸೂಳೆ ಸಂಕವ್ವ ಸೇರಿದಂತೆ ಎಲ್ಲಾ ಜಾತಿ ವರ್ಗದವರು ಇದ್ದರು. ಅಕ್ಕಮಹಾದೇವಿ ಸೇರಿದಂತೆ ಹಲವಾರು ಸ್ತ್ರೀಯರಿಗೂ ಅನುಭವ ಮಂಟಪದಲ್ಲಿ ಸ್ಥಾನವಿತ್ತು. ಸ್ತ್ರೀಯರಿಗೂ ಸಮಾನ ಅವಕಾಶ ನೀಡಿದ ಧರ್ಮ ಸಂಸತ್ತು ಅನುಭವ ಮಂಟಪವಾಗಿದೆ. ವಿಶ್ವ ಸಾಹಿತ್ಯಕ್ಕೆ ಕನ್ನಡದ ಕೊಡುಗೆಗಳಲ್ಲಿ ವಚನ ಸಾಹಿತ್ಯ ಮೇಲ್ಪಂಕ್ತಿಯಲ್ಲಿ ಬರುತ್ತದೆ. ಪಂಡಿತ ಹಾಗೂ ಪಾಮರರೂ ಸಹ ತಮ್ಮ ತಮ್ಮ ಅನುಭವಗಳನ್ನು ವಚನ ಸಾಹಿತ್ಯದ ಮೂಲಕ ವ್ಯಕ್ತಪಡಿಸಿದ್ದಾರೆ ಎಂದು ಬಿ.ಟಿ. ಕುಮಾರಸ್ವಾಮಿ ಹೇಳಿದರು.ಜಿಲ್ಲಾ ಗ್ಯಾರಂಟಿ ಯೋಜನೆ ಪ್ರಾಧಿಕಾರದ ಅಧ್ಯಕ್ಷ ಆರ್. ಶಿವಣ್ಣ ಮಾತನಾಡಿ, 2018 ರಲ್ಲಿ ಸರ್ಕಾರ ಬಸವಣ್ಣವರ ಭಾವಚಿತ್ರವನ್ನು ಎಲ್ಲಾ ಸರ್ಕಾರಿ ಕಚೇರಿಗಳಲ್ಲಿ ಅಳವಡಿಸುವಂತೆ ಆದೇಶ ಮಾಡಿತು. ನಂತರದಲ್ಲಿ ಬಸವಣ್ಣವನರನ್ನು ರಾಜ್ಯದ ಸಾಂಸ್ಕೃತಿಕ ನಾಯಕ ಎಂದು ಘೋಷಿಸಲಾಗಿದೆ. ಬಸವಣ್ಣವರ ಆಶಯಗಳಂತೆ ಸರ್ಕಾರ ಯೋಜನೆಗಳನ್ನು ರೂಪಿಸುತ್ತಿದೆ ಎಂದರು.ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ತಾಜ್‌ಪೀರ್ ಮಾತನಾಡಿ ಬಸಣ್ಣನವರ ತತ್ವಗಳನ್ನು ಪರಿಪೂರ್ಣವಾಗಿ ಪಾಲನೆ ಮಾಡಿದರೆ ಸಮಾಜದಲ್ಲಿ ಸಮಾನತೆ ಮೂಡಲು ಸಾಧ್ಯ ಎಂದರು. ಜಿಲ್ಲಾ ಗ್ಯಾರಂಟಿ ಯೋಜನೆ ಪ್ರಾಧಿಕಾರದ ಅಧ್ಯಕ್ಷ ಆರ್.ಶಿವಣ್ಣ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ತಾಜ್‌ಪೀರ್, ವೀರಶೈವ ಸಮಾಜದ ಅಧ್ಯಕ್ಷ ಹೆಚ್.ಎನ್. ತಿಪ್ಪೇಸ್ವಾಮಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಶಿವಮೂರ್ತಿ ಮಹಡಿ ಕಾರ್ಯಕ್ರಮದಲ್ಲಿ ಮಾತನಾಡಿದರು.ಜ್ಞಾನಭಾರತಿ ವಿದ್ಯಾಸಂಸ್ಥೆ ಪ್ರಾಂಶುಪಾಲ ಡಾ.ಪ್ರಜ್ವಲ್.ಬಿ.ಎಂ. ವಿಶೇಷ ಉಪನ್ಯಾಸ ನೀಡಿದರು. ನಗರ ಸಭೆ ಅಧ್ಯಕ್ಷೆ ಸುಮಿತಾ.ಬಿ.ಎನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು, ಉಪವಿಭಾಗಾಧಿಕಾರಿ ಮಹಬೂಬ್ ಜಿಲಾನಿ ಖುರೇಷಿ, ನಗರಸಭೆ ಪೌರಾಯುಕ್ತೆ ರೇಣುಕಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಗುರುನಾಥ್, ರಂಗಕರ್ಮಿ ಕೆಪಿಎಂ ಗಣೇಶಯ್ಯ, ಮುಖಂಡರುಗಳಾದ ಪಿ.ವೀರೇಂದ್ರಕುಮಾರ್, ಶಶಿಧರಬಾಬು, ಜಾಲಿಕಟ್ಟೆ ಶಿವರುದ್ರಪ್ಪ ಉಪಸ್ಥಿತರಿದ್ದರು.

## ಫಾಸ್ಟ್ ನ್ಯೂಸ್

### 2ರಂದು ಚಿತ್ರಕಲಾ ಸ್ಪರ್ಧೆ

» **ಚಿತ್ರದುರ್ಗ**

ಕಲಾ ಚೈತನ್ಯ ಸೇವಾ ಸಂಸ್ಥೆ (ಆರ್) ಸಾಂಸ್ಕೃತಿಕ ಕಲಾ ಸಂಘ ಚಿತ್ರದುರ್ಗ ವಿಶ್ವ ಕಲಾ ದಿನಾಚರಣೆ 2025 ಪ್ರಯುಕ್ತ ಮಕ್ಕಳಿಗೆ ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘಟಕರು ತಿಳಿಸಿದ್ದಾರೆ. ಕಲಾ ಚೈತನ್ಯ ಸೇವಾ ಸಂಸ್ಥೆ (ರಿ) ಸಾಂಸ್ಕೃತಿಕ ಕಲಾ ಸಂಘ ಚಿತ್ರದುರ್ಗ ಇವರ ಸಂಯುಕ್ತ ಆಶ್ರಯದಲ್ಲಿ ವಿಶ್ವ ಖ್ಯಾತಿಯ ಕಲಾವಿದ ಲಿಯನಾರ್ಡೊ ಡಾವಿನ್ಸಿರವರ ಜನ್ಮ ದಿನದ ಸವಿನೆನಪಿಗಾಗಿ ವಿಶ್ವ ಕಲಾ ದಿನಾಚರಣೆ ಪ್ರಯುಕ್ತ ಮಕ್ಕಳಿಗೆ ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆಯನ್ನು ಮೇ.02ರ ಶುಕ್ರವಾರ ಬೆಳಗ್ಗೆ 10.30 ಕ್ಕೆ ಧರ್ಮಶಾಲಾ ರಸ್ತೆಯಲ್ಲಿನ ಕೋಮಲ ನರ್ಸಿಂಗ್ ಹೊಂ ಹತ್ತಿರ ಸೀತಾರಾಮ ಮಂದಿರ ನಡೆಸಲಾಗುವುದು. ಚಿತ್ರಕಲಾ ಸ್ಪರ್ಧೆಗೆ 1 ನೇ ತರಗತಿಯಿಂದ10ನೇ ತರಗತಿ ವಿದ್ಯಾರ್ಥಿಗಳು ಮಾತ್ರ ಭಾಗವಹಿಸುವುದು. ಚಿತ್ರಕಲಾ ಸ್ಪರ್ಧೆಗೆ ಡ್ರಾಯಿಂಗ್ ಶೀಟ್ ಪ್ರಾಯೋಜಕರೇ ನೀಡಲಾಗುವುದು. ಚಿತ್ರಕಲಾ ಸ್ಪರ್ಧೆಯ ಪರಿಕರಗಳು ಮಕ್ಕಳೇ ತರತಕ್ಕದ್ದು. ಚಿತ್ರಕಲಾ ಸ್ಪರ್ಧೆ 1 ಗಂಟೆ ಸಮಯ ಮಾತ್ರ ನೀಡಲಾಗುವುದು. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ನಾಗರಾಜ್ ಬೇದ್ರೆ 9886991508 ನವೀನ್ ಬೇದ್ರೆ–9916177880 ಶೃತಿ ಎಸ್ ಹೆಗಡೆ  8762825448 ಇವರನ್ನು ಸಂಪರ್ಕ ಮಾಡಬಹುದಾಗಿದೆ ಎಂದು ತಿಳಿಸಿದ್ದಾರೆ.

### ಕಾರ್ಮಿಕರ ದಿನಾಚರಣೆ

» **ಚಿತ್ರದುರ್ಗ**

ಎಐಟಿಯುಸಿ ಭಾರತ ಕಮ್ಯೂನಿಸ್ಟ್ ಪಕ್ಷ ಚಿತ್ರದುರ್ಗ ಜಿಲ್ಲಾ ಕಾರ್ಮಿಕರ ಸಾಮೂಹಿಕ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ 48ನೇ ವರ್ಷದ ಹುತಾತ್ಮರ ಕಾರ್ಮಿಕರ ಮೇ ದಿನಾಚರಣೆಯನ್ನು ಮೇ.1 ರ ಗುರುವಾರ ಧಾವಣಗೆರೆ ರಸ್ತೆಯ ಎ.ಐ.ಟಿ.ಯು.ಸಿ. ಕಛೇರಿ ಮುಂಭಾಗದಲ್ಲಿ 10.30ಕ್ಕೆ ಹಮ್ಮಿಕೊಳ್ಳಲಾಗಿದೆ. ಬೆಳ್ಗೆ 9.30ರಿಂದ ಏಐಟಿಯುಸಿ ಕಚೇರಿಯಿಂದ ಮೆರವಣಿಗೆ ನಡೆಯಲಿದೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎ.ಐ.ಟಿ.ಯು.ಸಿ. ಜಿಲ್ಲಾ ಗೌರವಾಧ್ಯಕ್ಷರಾದ ಸಿ.ವೈ. ಶಿವರುದ್ರಪ್ಪ ವಹಿಸಲಿದ್ದಾರೆ. ಸಿ.ಪಿ.ಐ. ರಾಜ್ಯ ಕಾರ್ಯದರ್ಶಿಗಳು ಹಾಗೂ ಚಿತ್ರದುರ್ಗ ಜಿಲ್ಲಾ ಉಸ್ತುವಾರಿಗಳಾದ ಕಾಂ ಸಾತಿ ಸುಂದರೇಶ್, ಸಾಂಖ್ಯಿಕ ಇಲಾಖೆ ಸಚಿವರಾದ ಡಿ. ಸುಧಾಕರ್, ಶಾಸಕರಾದ ಕೆ.ಸಿ. ವೀರೇಂದ್ರ (ಪಪ್ಪಿ) ಟಿ. ರಘುಮೂರ್ತಿ ಬಿ.ಜಿ. ಗೋವಿಂದಪ್ಪ ಮಾಜಿ ಸಚಿವರಾದ ಹೆಚ್. ಆಂಜನೇಯ, ನಗರಸಭೆಯ ಅಧ್ಯಕ್ಷರಾದ ಶ್ರೀಮತಿ ಸುಮಿತಾ ಬಿ.ಎನ್. ರಘು ಎ.ಐ.ಟಿ.ಯು.ಸಿ.ಜಿಲ್ಲಾಪ್ರಧಾನಕಾರ್ಯದರ್ಶಿಗಳು, ಕಾಂ॥ ಜಿ.ಸಿ. ಸುರೇಶ್‌ಬಾಬು, ನರಸಿಂಹಮೂರ್ತಿ, ಹಮಾಲರ ಸಂಘದ ಅಧ್ಯಕ್ಷರಾದ ಬಸವರಾಜು, ಬಸ್ತಿಹಳ್ಳಿ ಸುರೇಶ್ ಬಾಬು, ಧನಂಜಯ, ದೊಡ್ಡ ಉಳ್ಳಾರ್ತಿ ಕರಿಯಣ್ಣ, ಹನುಮಂತಪ್ಪ ಉಂಆಪತಿ, ಜಯದೇವ ಮೂರ್ತಿ, ಜಾಫರ್ ಷರೀಫ್, ಕುಮಾರ್, ಸೇರಿದಂತೆ ಇತರರೂ ಭಾಗವಹಿಸಲಿದ್ದಾರೆ.

### ಎಐಟಿಯುಸಿಯಿಂದ ಕಾರ್ಮಿಕರ ದಿನಾಚರಣೆ

» **ಚಿತ್ರದುರ್ಗ**

ಭಾರತ ಕಮ್ಯುನಿಸ್ಟ್ ಪಕ್ಷ ಜಿಲ್ಲಾ ಕಾರ್ಮಿಕರ ಸಂಘಟನೆಗಳ ಸಂಯುಕ್ತಾಶ್ರಯದಲ್ಲಿ 48 ನೇ ಹುತಾತ್ಮರ ಕಾರ್ಮಿಕರ ಮೇ ದಿನಾಚರಣೆಯನ್ನು ಮೇ.1 ರಂದು 'ಳಿಗ್ಗೆ 10–30 ಕ್ಕೆ ದಾವಣಗೆರೆ ರಸ್ತೆಯಲ್ಲಿರುವ ಎ.ಐ.ಟಿ.ಯು.ಸಿ. ಕಚೇರಿ ಮುಂಭಾಗದಲ್ಲಿ ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 9–30 ಕ್ಕೆ ಎ.ಐ.ಟಿ.ಯು.ಸಿ. ಕೇಂದ್ರ ಕಚೇರಿಯಿಂದ ಮೆರವಣಿಗೆ ಹೊರಡಲಿದೆ. ಎ.ಐ.ಟಿ.ಯು.ಸಿ. ಗೌರವಾಧ್ಯಕ್ಷ ಕಾಂ.ಸಿ.ವೈ.ಶಿವರುದ್ರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ.ಸಿ.ಪಿ.ಐ. ರಾಜ್ಯ ಕಾರ್ಯದರ್ಶಿ ಕಾಂ.ಸಾತಿ ಸುಂದರೇಶ್, ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್, ಶಾಸಕರುಗಳಾದ ಕೆ.ಸಿ.ವೀರೇಂದ್ರಪಪ್ಪಿ, ಬಿ.ಜಿ.ಗೋವಿಂದಪ್ಪ, ಟಿ.ರಘುಮೂರ್ತಿ, ಮಾಜಿ ಸಚಿವ ಹೆಚ್. ಆಂಜನೇಯ, ನಗರಸಭೆ ಅಧ್ಯಕ್ಷೆ ಸುಮಿತ, ಎ.ಐ.ಟಿ.ಯು.ಸಿ. ಜಿಲ್ಲಾ ಮಂಡಳಿ ಅಧ್ಯಕ್ಷ ಕಾಂ.ಬಿ.ಬಸವರಾಜ್, ನಗರಸಭೆ ಸದಸ್ಯ ನರಸಿಂಹಮೂರ್ತಿ ಇನ್ನು ಅನೇಕರು ಆಗಮಿಸಲಿದ್ದಾರೆ.ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ಮೇ ದಿನಾಚರಣೆಯಲ್ಲಿ ಭಾಗವಹಿಸುವಂತೆ ಎ.ಐ.ಟಿ.ಯು.ಸಿ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಂ.ಜಿ.ಸಿ.ಸುರೇಶ್‌ಬಾಬು ಮನವಿ ಮಾಡಿದ್ದಾರೆ.

### ಜಿಲ್ಲಾ ಕಟ್ಟಡ ಕಾರ್ಮಿಕರ ಸಂಘದ ವತಿಯಿಂದ ಕಾರ್ಮಿಕರ ದಿನಾಚರಣೆ

» **ಚಿತ್ರದುರ್ಗ**

ಜಿಲ್ಲಾ ಕಟ್ಟಡ ಕಾರ್ಮಿಕರ ಸಂಘದ ವತಿಯಿಂದ ಮೇ. 27 ರಂದು ಪತ್ರಕರ್ತರ ಭವನದಲ್ಲಿ ನಡೆಯುವ ಮೇ ದಿನಾಚರಣೆಯಲ್ಲಿ ಕಟ್ಟಡ ಕಾರ್ಮಿಕರ ಪ್ರತಿಭಾವಂತ 5 ಮಕ್ಕಳನ್ನು ಸನ್ಮಾನಿಸಲಾಗುವುದು. 2024–25 ನೇ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿ.ಯಲ್ಲಿ ಶೇ. 70 ಕ್ಕಿಂತ ಹೆಚ್ಚಿನ ಅಂಕಗಳನ್ನು ಗಳಿಸಿರುವ ನೊಂದಾಯಿತ ಕಟ್ಟಡ ಕಾರ್ಮಿಕರ ಮಕ್ಕಳು ಕಾರ್ಮಿಕರ ಗುರುತಿನ ಚೀಟಿ ಹಾಗೂ ಅಂಕಪಟ್ಟಿಯೊಂದಿಗೆ ಚಿತ್ರದುರ್ಗ ಜಿಲ್ಲಾ ಕಟ್ಟಡ ಕಾರ್ಮಿಕರ ಸಂಘ, ಮಹಾತ್ಮಗಾಂಧಿ ವೃತ್ತದ ಸಮೀಪ, ಬಿ.ಡಿ.ರಸ್ತೆ, ಚಿತ್ರದುರ್ಗ ಇಲ್ಲಿಗೆ ದಿನಾಂಕ : 15–5–2025 ರೊಳಗಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ ಎಂದು ಜಿಲ್ಲಾ ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ವೈ. ತಿಪ್ಪೇಸ್ವಾಮಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ : 9611778091, 9448442382.

# ಬಸವಾದಿ ಶರಣರ ತತ್ವಗಳನ್ನು ಅನುಸರಿಸಿ ನಿಸ್ವಾರ್ಥ ಜಗತ್ತು ಸೃಷ್ಟಿಯಾಗಲಿ: ಸ್ವಾಮೀಜಿ

» **ಚಿತ್ರದುರ್ಗ**



ತಾಲ್ಲೂಕಿನ ಗೋನೂರಿನ ನಿರಾಶ್ರಿತರ ಕೇಂದ್ರದಲ್ಲಿಬುಧವಾರಮುರುಘರಾಜೇಂದ್ರ ಬೃಹನ್ಮಠದಿಂದ ಬಸವೇಶ್ವರರ ಜಯಂತ್ಯೋತ್ಸವ ಆಚರಿಸಲಾಯಿತು.

ಎಸ್‌ಜೆಎಂ ವಿದ್ಯಾಪೀಠದ ಆಡಳಿತ ಮಂಡಳಿ ಸದಸ್ಯ ಡಾ.ಬಸವ ಕುಮಾರ ಸ್ವಾಮೀಜಿ, ನಿಜವಾದ ಬಸವಣ್ಣನವರ ಆಶಯವೆಂದರೆ ಇಂತಹ ಅನೇಕ ಅರ್ಥಪೂರ್ಣವಾದ ಕಾರ್ಯಕ್ರಮಗಳನ್ನು ಮಾಡುವುದಾಗಿದೆ. ಆದುದರಿಂದ ಈ ಕಾರ್ಯಕ್ರಮವನ್ನು ನಿಮ್ಮಗಳ ಸನ್ನಿಧಿಯಲ್ಲಿ ನಡೆಸಲು ತೀರ್ಮಾನಿಸಲಾಯಿತು. ಈ ಕೇಂದ್ರದಲ್ಲಿ 282 ನಿರಾಶ್ರಿತರಿದ್ದಾರೆ, ಇವರಿಗೆ ನಮ್ಮ ಬಸವೇಶ್ವರ ಆಸ್ಪತ್ರೆಯಲ್ಲಿ ಪ್ರತಿದಿನ 25 ಜನರಿಗೆ ಆರೋಗ್ಯ ತಪಾಸಣೆಯನ್ನು ಮಾಡಿಸಲಾಗುವುದು ಮತ್ತು ಉಚಿತ ದಾಖಲಾತಿಯನ್ನು ಸಹ ಕಲ್ಪಿಸಿ ಕೊಡಲಾಗುವುದು. ದುರಾಸೆಯ ಸ್ವಾರ್ಥಜಗತ್ತು ಇಂದಿನ ದಿನ ಸೃಷ್ಟಿಯಾಗುತ್ತಿದೆ. ಮುಂದಿನ ದಿನಮಾನಗಳಲ್ಲಾದರೂ ಬಸವಾದಿ ಶರಣರ ತತ್ವಗಳನ್ನು ಅನುಸರಿಸಿ ನಿಸ್ವಾರ್ಥ ಜಗತ್ತು ಸೃಷ್ಟಿಯಾಗಲಿ ಎಂದು ನುಡಿದರು.

ಮಾದಾರ ಚೆನ್ನಯ್ಯ ಗುರುಪೀಠದ ಶ್ರೀ ಬಸವಮೂರ್ತಿ ಮಾದಾರ ಚೆನ್ನಯ ಸ್ವಾಮೀಜಿ ಮಾತನಾಡಿ, ನಿರಾಶ್ರಿತರೆಲ್ಲರೂ ಬಸವಣ್ಣನವರ ಮಕ್ಕಳು, 12ನೇ ಶತಮಾನದಲ್ಲಿ ಬಸವಣ್ಣನವರು ನಮ್ಮ ನಾಡಿನಲ್ಲಿ ಹುಟ್ಟಿರದಿದ್ದರೆ ನಾವೆಲ್ಲ ಸಮಾನತೆಯಿಂದ ಕೂಡಿರಲು ಸಾಧ್ಯವಿರಲಿಲ್ಲ. ಸಮಾನತೆಯ ಆಶಯ ನೀಡಬೇಕೆಂದು ಬಯಸಿದವರು ಬಸವಣ್ಣನವರು ಎಂದು ತಿಳಿಸಿದರು. ಉಳ್ಳವರು ಬಡಾವಣೆಯಲ್ಲಿ ಕಾರ್ಯಕ್ರಮ ನಡೆಸುವ ಬದಲು ಇಂತಹ ನಿರಾಶ್ರಿತರ ಕೇಂದ್ರಗಳಲ್ಲಿ ಆಚರಿಸಿದರೆ ಅರ್ಥಪೂರ್ಣವಾಗಿರುತ್ತದೆ. ನಿರಾಶ್ರಿತರಾದ ತಮಗೆ ಯಾರು ಇಲ್ಲ ಎಂದ ಭಾವಿಸಬೇಡಿ, ನಿಮ್ಮ ಬಳಿ ಬಸವಣ್ಣನವರಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಈ ಆಶ್ರಮ ಇರುವುದು ನಿಮ್ಮಗಳ ಜೀವನದಲ್ಲಿ ಆಶಾದಾಯಕವಾದಂತಹದು. ಶ್ರೀಮಠವು ಬಸವಣ್ಣನವರ ಆಶಯದಂತೆ ಸಮಾಜದಲ್ಲಿ ಅನೇಕ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿದೆ ಎಂದು ನುಡಿದರು.

ಎಸ್‌ಜೆಎಂ ವಿದ್ಯಾಪೀಠದ ಅಧ್ಯಕ್ಷ ಶಿವಯೋಗಿ.ಸಿ.ಕಳಸದ ಮಾತನಾಡಿ, ಮಹಾನ್ ಮಾನವತಾವಾದಿ ಸಂದೇಶವನ್ನು ಬಸವಣ್ಣನವರು ನೀಡಿದ್ದಾರೆ. ಸುಸಜ್ಜಿತ ಮತ್ತು ಪೂರಕವಾದ ಆಶ್ರಮ ಇದಾಗಿದೆ. ಎಲ್ಲೋ ಹುಟ್ಟಿ ಎಲ್ಲೋ ಬೆಳದು ಜೀವನದ ತೊಡಕಿನಿಂದ ನಿರಾಶ್ರಿತರಾಗಿದ್ದೀರ, ನೀವು ಜೀವನ ನಡೆಸಲು ಬಹಳ ಬಹಳ ಕಷ್ಟ ಪಟಿದ್ದೀರಾ. ಈ ನಿಟ್ಟಿನಲ್ಲಿ ಸರ್ಕಾರವು ಶಿಸ್ತುಬದ್ಧತೆಯ ಜೀವನ ನಡೆಸಲು ಆಶ್ರಯ ಇಲ್ಲದವರಿಗೆ ಈ ರೀತಿಯ ನಿರಾಶ್ರಿತ ಕೇಂದ್ರವನ್ನು ನೀಡಿರುವುದು ಸ್ವಾಗತಾರ್ಹ ಎಂದರು.

900 ವರ್ಷಗಳ ಹಿಂದೆ ಯಾವುದೇ ಸೌವಲತ್ತುಗಳು ಇಲ್ಲದಿರವುದನ್ನು ಕಾಣಬಹುದು, ಅಂತಹ ಸಮಯದಲ್ಲಿ ಬಸವಣ್ಣನವರ ಸಂದೇಶಗಳು, ಮಾರ್ಗದರ್ಶನಗಳು ಶಕ್ತಿಯುತವಾದಂತಹವುಗಳು ಎಂದು ತಿಳಿಸುತ್ತಾ ಕಾರ್ಯಕ್ರಮದಲ್ಲಿ ಸೇರಿದ್ದ ಎಲ್ಲರಿಗೂ ಬಸವ ಜಯಂತಿಯ ಶುಭಾಶಯ ಕೋರಿದರು.

ಕಾರ್ಯಕ್ರಮದಲ್ಲಿ ಖ್ಯಾತ ವಕೀಲರಾದ ಶ್ರೀ ಉಮೇಶ್, ನಿರಾಶ್ರಿತ ಕೇಂದ್ರದ ಸಂಯೋಜಕರಾದ ಎಂ.ಮಹಾದೇವಯ್ಯ ಮತ್ತು ವಿಜಯ ಕುಮಾರ, ಎಸ್.ಜೆ.ಎಂ.ವಿದ್ಯಾಪೀಠದ ವಿವಿಧ ಸಂಸ್ಥೆಗಳ ಮುಖ್ಯಸ್ಥರುಗಳು, ಸಿಬ್ಬಂದಿ ವರ್ಗದವರು, ಹರಗುರುಚರ ಮೂರ್ತಿಗಳು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಎಸ್.ಜೆ.ಎಂ.ಐ.ಟಿ ಕಾಲೇಜಿನ ಶ್ರೀಮತಿ.ವಿಶಾಲಾಕ್ಷಿಯವರು 26 ನಿರಾಶ್ರಿತ ಮಹಿಳೆಯರಿಗೆ ಉಚಿತವಾಗಿ ಸೀರೆಗಳನ್ನು ವಿತರಿಸಿದರು.ಕಾರ್ಯಕ್ರಮದಲ್ಲಿ ಜಮುರಾ ಕಲಾಲೋಕದ ಉಮೇಶ್ ಪತ್ತಾರ್ ಪ್ರಾರ್ಥಿಸಿ, ಎಸ್.ಜೆ.ಎಂ.ಐ.ಟಿ ಕಾಲೇಜಿನ ಡಾ. ಹೆಚ್.ಜೆ.ಲೋಕೇಶ್ ಸ್ವಾಗತಿಸಿ, ಪಲ್ಲವಿ.ಎಂ ವಂದಿಸಿ, ಆಕಾಶವಾಣಿಯ ನವೀನ್ ಮಸ್ಕಲ್ ನಿರೂಪಿಸಿದರು.

# ಬಡಗಿ ಕೆಲಸಗಾರರ ಸಂಘ ನಿಗಧಿ ಪಡಿಸಿದ ಹಣ ಮೇ ತಿಂಗಳ ಅಂತ್ಯದೊಳಗೆ ಪಾವತಿಸಿ

» **ಚಿತ್ರದುರ್ಗ**



ಜಿಲ್ಲಾ ಬಡಗಿ ಕೆಲಸಗಾರರ ಸಂಘದವತಿಯಿಂದ ಅಭಿವೃದ್ಧಿ ಪಡಿಸಲಾಗಿರುವ ಬಡಾವಣೆಯಲ್ಲಿ ರಾಜೀವ್ ಗಾಂಧಿ ವಸತಿ ಯೋಜನೆಯಡಿಯಲ್ಲಿ ವಸತಿ ಸೌಲಭ್ಯ ಕಲ್ಪಿಸಲು ಸರ್ಕಾರ ಮಂಜೂರಾತಿ ನೀಡಿದ್ದು, ಫಲಾನುಭವಿಗಳು ಸಂಘವು ನಿಗಧಿ ಪಡಿಸಿರುವ ಹಣವನ್ನು ಮೇ ತಿಂಗಳ ಅಂತ್ಯದೊಳಗಾಗಿ ಪಾವತಿಸಬೇಕು ಎಂದು ಜಿಲ್ಲಾ ಬಡಗಿ ಕೆಸಲಗಾರರ ಕ್ಷೇಮಾಭಿವೃದ್ಧಿ ಸಂಘ ಸೂಚಿಸಿದೆ

ಪ್ರವಾಸಿ ಮಂದಿರದಲ್ಲಿ ಜಿಲ್ಲಾ ಬಡಗಿ ಕೆಸಲಗಾರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಎ.ಜಾಕೀರ್ ಹುಸೇನ್ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ಸಂಬಂಧ ಸುದೀರ್ಘವಾಗಿ ಚರ್ಚೆ ನಡೆಸಿ, ವಸತಿ ಯೋಜನೆಗೆ ಆಯ್ಕೆಯಾಗಿರುವ ಕೆಲವು ಫಲಾನುಭವಿಗಳು ಇದುವರೆಗೂ ದಾಖಲೆ ಮತ್ತು ಹಣ ಪಾವತಿ ಮಾಡಿಲ್ಲ. ಒಂದು ತಿಂಗಳ ಒಳಗಾಗಿ ಸಂಘದ ನಿಯಮಾವಳಿ ಪ್ರಕಾರ ನಿಗಧಿ ಪಡಿಸಿರುವ ಶುಲ್ಕ, ದಾಖಲೆಗಳನ್ನು ಸಲ್ಲಿಸಲು ಅಂತಿಮ ಗಡುವು ನೀಡಲು ತೀರ್ಮಾನ ಕೈಗೊಳ್ಳಲಾಗಿದೆ

ಈಗಾಗಲೇ ಫಲಾನುಭವಿಗಳಿಗೆ ಹಲವು ಬಾರಿ ದಾಖಲೆ, ವಸತಿ ಬಾಬ್ತು ನಿಗಧಿ ಪಡಿಸಿರುವ ಹಣವನ್ನು ಪಾವತಿಸಲು ಸೂಚನೆ ನೀಡಲಾಗಿದೆ. ಆದರೂ ಇನ್ನೂ ಶೇ. 40 ರಷ್ಟು ಫಲಾನುಭವಿಗಳು ಹಣವೂ ಪಾವತಿಸಿಲ್ಲ, ದಾಖಲಾತಿಯನ್ನೂ ನೀಡಿರುವುದಿಲ್ಲ. ಹೀಗಾಗಿ ಮೇ ತಿಂಗಳ ಅಂತ್ಯದೊಳಗಾಗಿ ಹಣ ಪಾವತಿಸಬೇಕು. ಇಲ್ಲವಾದರೆ ಅವರ ಹೆಸರನ್ನು ಪಟ್ಟಿಯಿಂದ ತೆಗೆದು ಹಾಕಲಾಗುವುದು ಎಂದು ಸಂಘದ ಜಿಲ್ಲಾಧ್ಯಕ್ಷ ಎ.ಜಾಕೀರ್ ಹುಸೇನ್ ತಿಳಿಸಿದ್ದಾರೆ

ದಾವಣಗೆರೆರಸ್ತೆಯಲ್ಲಿಬಡಕುಶಲಕರ್ಮಿಗಳು, ಬಡಗಿ ಕೆಲಸಗಾರರಿಗೆ ನಿವೇಶನ ಮತ್ತು ವಸತಿ ಸೌಲಬ್ಯಗಳನ್ನು ಕಲ್ಪಸಿಕೊಡುವ ಉದ್ದೇಶದಿಂದ ಜಮೀನು ಖರೀದಿ ಮಾಡಿದ್ದು, ಅಲ್ಲಿ ಈಗಾಗಲೇ ಬಡಾವಣೆ ಅಭಿವೃದ್ಧಿಯಾಗುತ್ತಿದೆ. ಸಂಘದ ಸದಸ್ಯರಿಂದ ಅತೀ ಕಡಿಮೆ ಶುಲ್ಕ ಪಡೆದು ನಿವೇಶನ ಮತ್ತು ವಸತಿ ಸೌಲಭ್ಯಕ್ಕಾಗಿ ಕಳೆದ 15 ವರ್ಷಗಳಿಂದ ಸತತ ಹೋರಾಟ ಮಾಡಿಕೊಂಡು ಬರಲಾಗಿದೆ.

ರಾಜೀವ್‌ಗಾಂಧಿವಸತಿಯೋಜನೆಯಡಿಯಲ್ಲಿ 418 ಮನೆಗಳನ್ನು ನಿರ್ಮಿಸಿಕೊಡಲು ಸರ್ಕಾರ ಮಂಜೂರಾತಿ ನೀಡಿದ್ದು, ಅದಕ್ಕಾಗಿ ಜಮೀನು ಸಹ ಸರ್ಕಾರದ ಹೆಸರಿಗೆ ನೊಂದಾಣಿ ಮಾಡಿಕೊಡಲಾಗಿದೆ. ಈಗಾಗಲೇ ತುಂಬಾ ವಿಳಂಬವಾಗಿರುವ ಕಾರಣ ನಮಗೂ ಬೇಸರವಾಗಿದೆ. ಜಿಲ್ಲಾಡಳಿತ ನೀಡಿರುವ ಸೂಚನೆ ಮೇರೆಗೆ ಮೊನ್ನೆ ಮೊದಲ ಹಂತದ ಪಲಾನುಭವಿಗಳ ಪಟ್ಟಿಯಲ್ಲಿ ಸಹ ಸಲ್ಲಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ

ಸಂಘದವತಿಯಿಂದ ಖರೀದಿ ಮಾಡಿರುವ ಜಮೀನಿನಲ್ಲಿ ಬೆಳೆದಿದ್ದ ಗಿಡಮರಗಳನ್ನು ತೆರೆವು ಮಾಡಲಾಗಿದೆ, ದೊಡ್ಡ ಗಾತ್ರದಲ್ಲಿ ಬಂಡೆ, ಕಲ್ಲುಗಳನ್ನು ತೆಗೆಸಿ ಜಮೀನು ಸಮತಟ್ಟವಾಗಿ ಮಾಡಲಾಗಿದೆ. ಬಡಾವಣೆಯ ಅಭಿವೃದ್ಧಿಗಾಗಿ ಸಂಘದ ಪದಾಧಿಕಾರಿಗಳು ಲಕ್ಷಾಂತರ ರೂಪಾಯಿಗಳನ್ನು ವೆಚ್ಚ ಮಾಡಿದ್ದಾರೆ ಎಂದರು

ಈಗ ಸಂಘದ ಕಾರ್ಯಕಾರಿ ಸಮಿತಿ ಕೈಗೊಂಡಿರುವ ತೀರ್ಮಾನದಂತೆ ಮೇ ತಿಂಗಳ ಒಳಗಾಗಿ ಹಣ ಪಾವತಿಸದಿದ್ದರೆ, ಅಂತಹವರ ಹೆಸರನ್ನು ಕೈ ಬಿಡಲಾಗುವುದು. ಇದು ಅನಿವಾರ್ಯವೂ ಆಗಿದೆ ಎಂದು ಜಾಕೀರ್ ಹುಸೇನ್ ತಿಳಿಸಿದರು

ಸಭೆಯಲ್ಲಿ ಸಂಘದ ಪದಾಧಿಕಾರಿಗಳಾದ ಆರೂಡಾಚಾರ್, ಬಸವರಾಜಪ್ಪ, ಗಂಗಾಧರ್ ಚಾರ್, ಸುರೇಶ್, ಜಗದೀಶ್, ಅಕ್ಬರ್ ಇನ್ನಿತರರು ಇದ್ದರು.

## ಬಸವೇಶ್ವರ ಭಾವಚಿತ್ರ ಮೆರವಣಿಗೆ




» **ಚಿತ್ರದುರ್ಗ**

ವಿಶ್ವ ಗುರು, ಮಹಾಮಾನವತಾವಾದಿ ಸಾಂಸ್ಕೃತಿಕ ನಾಯಕ ಶ್ರೀ ಬಸವಣ್ಣನವರ ಜಯಂತ್ಯೋತ್ಸವದ ಅಂಗವಾಗಿ ವೀರಶೈವ ಸಮಾಜದ ಹಾಗೂ ಜಿಲ್ಲಾಡಳಿತದವತಿಯಿಂದ ಶ್ರೀ ನೀಲಕಂಠೇಶ್ವರ ದೇವಾಲಯದಿಂದ ಶ್ರೀ ಬಸವೇಶ್ವರ ಭಾವಚಿತ್ರದ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯಲ್ಲಿ ಭಾಗವಹಿಸಿದ್ದವರಿಗೆ ತಲೆಗೆ ಬಸವೇಶ್ವರ ಭಾವಚಿತ್ರ ಇರುವ ಟೋಪಿ ಹಾಗೂ ಶಾಲನ್ನು ಹಾಕಲಾಯಿತು. ಇದರಲ್ಲಿ ಕಹಳೆ, ಟ್ಯಾಷ್ಯೊ, ತಟ್ಟೆರಾಯ, ಕೀಲು ಕುದುರೆ ಸೇರಿದಂತೆ ವಿವಿಧ ರೀತಿಯ ಜಾನಪದ ಕಲಾ ತಂಡಗಳು ಭಾಗವಹಿಸಿದ್ದವು. ಬೆಳ್ಳಿ ರಥದಲ್ಲಿ ಬಸವೇಶ್ವರ ಭಾವಚಿತ್ರಕ್ಕೆ ವಿಶೇಷವಾದ ಅಲಂಕಾರವನ್ನು ಮಾಡುವುದರ ಮೂಲಕ ಪೂಜೆಯನ್ನು ಸಲ್ಲಿಸಿದ ವೀರಶೈವ ಸಮಾಜದ ಅಧ್ಯಕ್ಷರಾದ ತಿಪ್ಪೇಸ್ವಾಮಿಯವರು ಮೆರವಣಿಗೆಗೆ ಚಾಲನೆ ನೀಡಿದರು. ಮಧ್ಯಾಹ್ನ 3 ಗಂಟೆಯಿಂದ ಮೆರವಣಿಗೆಯೂ ಸಂತೇಪೇಟೆವೃತ್ತ, ಅನೆಬಾಗಿಲು, ಚಿಕ್ಕಪೇಟೆ, ಉಚ್ಚಂಗಿಯಲ್ಲಮ್ಮ ದೇವಾಲಯ, ದೊಡ್ಡಪೇಟೆ, ರಂಗಯ್ಯನಬಾಗಿಲು, ಬಸವಮಂಟಪ, ಗುರುಭವನ, ಡಾ.ಬಿ.ಆರ್. ಅಂಬೇಡ್ಕರ್ ವೃತ್ತ, ಮಹಾವೀರವೃತ್ತ, ಎಸ್.ಬಿ.ಎಂ.ವೃತ್ತ, ಬಿ.ಡಿ.ರಸ್ತೆಯ ಮೂಲಕ ಮರಳಿಶ್ರೀ ನೀಲಕಂಠೇಶ್ವರ ದೇವಾಲಯ ತಲುಪಿತು. ಈ ಮೆರವಣಿಗೆಯಲ್ಲಿ ಶ್ರೀ ಜಗದ್ಗುರು ಮುರಾಘರಾಜೇಂದ್ರ ಬೃಹನ್ಮಠ, ವೀರಶೈವ ಸಮುದಾಯದ ವಿವಿಧ ಸಂಘಟನೆಯ ನೌಕರರು, ಪದಾಧಿಕಾರಿಗಳು, ಸಿಬ್ಬಂದಿ ವರ್ಗ, ಜಂಗಮ ಸಮಾಜ, ಅಖಿಲ ಭಾರತ ವೀರಶೈವ ಮಹಾಸಭಾ, ಪಂಚಮಸಾಲಿ ಸಂಘ, ಸಾಧು–ಸದ್ಧರ್ಮ, ಶಿವಸಿಂಪಿ, ಮಹಿಳಾ ಘಟಕ, ಗಾಣಿಗ, ಕುಂಚಿಟಿಗ, ಹೇಮರೆಡ್ಡಿ ಮಲ್ಲಮ್ಮ, ಕುಂಬಾರ, ಹಡಪದ, ನೊಳಂಬ ಸಮಾಜ ಯುವ ವೇದಿಕೆ, ಯುವ ಘಟಕ ಸೇರಿದಂತೆ ಇತರೆ ಸಂಘಟನೆಗಳ ಪದಾಧಿಕಾರಿಗಳು ಚಿತ್ರದುರ್ಗದ ಸುತ್ತಾ–ಮುತ್ತಲ್ಲಿನ ಜನತೆ ಭಾಗವಹಿಸಿದ್ದರು.

## ಪ್ರಮುಖ ಸುದ್ದಿ

# ನಗರದಲ್ಲಿ ವೀರಶೈವ ಸಮುದಾಯ ಭವನಕ್ಕೆ ಭೂಮಿಪೂಜೆ

» **ಚಿತ್ರದುರ್ಗ**



ಚಿತ್ರದುರ್ಗ ನಗರದ ವೀರಶೈವ ಅರ್ಬನ್ ಕೋ–ಆಪರೇಟಿವ್ ಸೊಸೈಟಿಯವತಿಯಿಂದ 25ನೇ ವರ್ಷದ ಅಂಗವಾಗಿ ದವಳಗಿರಿ ಬಡಾವಣೆಯಲ್ಲಿ ನೂತನವಾಗಿ ವಿರಶೈವ ಸಮುದಾಯ ಭವನ ನಿರ್ಮಾಣಕ್ಕೆ ಮುಂದಾಗಿದ್ದು ಇದರ ಭೂಮಿ ಪೂಜೆಯನ್ನು ಇಂದು ನಡೆಸಲಾಯಿತು.

ಸೊಸೈಟಿಯ ಅಧ್ಯಕ್ಷರಾದ ಪಟೇಲ್ ಶಿವಕುಮಾರ್ ಸೇರಿದಂತೆ ಆಡಳಿತ ಮಂಡಳಿಯ ಸದಸ್ಯರು ಭೂಮಿ ಪೂಜೆಯಲ್ಲಿ ಭಾಗವಹಿಸಿದ್ದು ಅಭಿಮಾನಿಗಳು ಹಿತೈಷಿಗಳು, ಸ್ನೇಹಿತರು ಆಗಮಿಸಿ ಸಮುದಾಯ ಭವನ ನಿರ್ಮಾಣಕ್ಕೆ ಶುಭ ಕೋರಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸೊಸೈಟಿಯ ಅಧ್ಯಕ್ಷರಾದ ಪಟೇಲ್ ಶಿವಕುಮಾರ್ ಸೊಸೈಟಿಯ ಷೇರುದಾರರಿಗೆ ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ನಗರಾಭೀವೃದ್ಧಿ ಪ್ರಾಧಿಕಾರದಿಂದ ದೊರೆತ್ತಿದ್ದು, ದಾವಣಗೆರೆ ಇಂಜಿನಿಯರ್ ಶಿವಕುಮಾರ್ ರವರು ನೀಲಿ ನಕಾಶೆಯನ್ನು ತಯಾರು ಮಾಡಿದ್ದಾರೆ. ಸುಮಾರು 60*180ಅಡಿ ಅಳತೆಯಲ್ಲಿ ಸುಮಾರು 2.50 ಕೋಟಿ ವೆಚ್ಚದಲ್ಲಿ ಸಮುದಾಯ ಭವನ ನಿರ್ಮಾಣವಾಗಲಿದ್ದು, ಇದರಲ್ಲಿ 300 ರಿಂದ 400 ಜನ ಕುಳಿತುಕೊಳ್ಳುವ ಹಾಲು ಅಡುಗೆ ಮನೆ, ವಾಹನಗಳಿಗೆ ಪಾರ್ಕಿಂಗ್ ಸೌಲಭ್ಯ, 5 ಕೊಠಡಿಗಳು, ಊಟದ ಮನೆಯನ್ನು ಸೇರಿದಂತೆ ಇತರೆ ಸೌಲಭ್ಯಗಳನ್ನು ಹೊಂದಿದೆ. ಇದರಲ್ಲಿ ನಮ್ಮ ಸೊಸೈಟಿಯ ಸಮಾರಂಭಗಳನ್ನು ಸಹಾ ಮುಂದಿನ ದಿನದಲ್ಲಿ ಮಾಡಲಾಗುವುದು. ಈ ಭಾಗದಲ್ಲಿ ಈ ರೀತಿಯಾದ ಸಮುದಾಯ ಭವನ ಇರಲ್ಲಿಲ್ಲ ಇಲ್ಲಿಗೆ ಅಗತ್ಯವಾಗಿತ್ತು ಇದನ್ನು ಮನಗಂಡು ಸೊಸೈಟಿ ವತಿಯಿಂದ ನಿರ್ಮಾಣ ಮಾಡಲು ಆಡಳಿತ ಮಂಡಳಿ ಮುಂದಾಗಿದೆ ಮುಂದಿನ ಒಂದು ತಿಂಗಳೊಳಗಾಗಿ ಕಟ್ಟಡದ ಕಾಮಗಾರಿಯನ್ನು ಪ್ರಾರಂಭ ಮಾಡಲಾಗುವುದು ಅಲ್ಲದೆ ಮುಂದಿನ ಆರು ತಿಂಗಳೊಳಗಾಗಿ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ ಎಂದರು.ವೀರಶೈವ ಅರ್ಬನ್ ಕೋ–ಆಪರೇಟಿವ್ ಸೊಸೈಟಿಯ ಉಪಾಧ್ಯಕ್ಷರಾದ ಜಿ.ಟಿ.ಸುರೇಶ್ ನಿರ್ದೇಶಕರುಗಳಾದ ಎಸ್.ಪರಮೇಶ್ವರಪ್ಪ, ಟಿ.ಮಹಾಂತೇಶ್, ಎಸ್.ವಿ.ನಾಗರಾಜಪ್ಪ, ಎಸ್.ಷಣ್ಮುಖಪ್ಪ, ಡಿ.ಎಸ್.ಮಲ್ಲಿಕಾರ್ಜುನ್, ಜಿ.ಎಂ.ಕರಿಬಸವಯ್ಯ, ಸಿ.ಚಂದ್ರಪ್ಪ, ಶ್ರೀಮತಿ ಜಯಶ್ರೀ, ಆರ್, ಶೈಲಜಾ ಸೇರಿದಂತೆ ಸೊಸೈಟಿಯ ಸಿಬ್ಬಂದಿ ವರ್ಗ ಹಾಜರಿದ್ದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಕೆ.ಎಸ್.ನವೀನ್, ಕೆಡಿಪಿ ಸದಸ್ಯರಾದ ನಾಗರಾಜ್, ಜಂಗಮ ಸಮಾಜದ ಅಧ್ಯಕ್ಷರಾದ ಮಲ್ಲಿಕಾರ್ಜುನಯ್ಯ, ವೀರಶೈವ ಸಮಾಜದ ಅಧ್ಯಕ್ಷರಾದ ತಿಪ್ಪೇಸ್ವಾಮಿ, ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ಮಹಡಿ ಶಿವಮೂರ್ತಿ, ನಿರ್ದೇಶಕರಾದ ಶ್ರೀಮತಿ ನಿರ್ಮಲ ಬಸವರಾಜು, ಮಹಿಳಾ ಘಟಕದ ಕಾರ್ಯದರ್ಶಿ ಉಮಾರಮೇಶ್, ವೀರಶೈವ ಸಮಾಜದ ಮುಖಂಡರಾದ ಕವಿತಾ ಶಿವಕುಮಾರ್, ಮಲ್ಲಿಕಾರ್ಜುನ್, ಕೊಟ್ರೇಶ್, ನಗರಸಭಾ ಸದಸ್ಯರಾದ ಬಿ.ಸುರೇಶ್, ಶ್ರೀಮತಿ ರೀನಾ ವೀರಭದ್ರಪ್ಪ, ಜಯ್ಯಣ್ಣ, ಕೆ.ಎನ್.ವಿಶ್ವನಾಥಯ್ಯ, ಜಯಕುಮಾರ್, ಸರೋಜಮ್ಮ ನಾಗಣ್ಣ, ಕೆ.ವಿ.ಪ್ರಭಾಕರ್, ಶಶಿಕಲಾ ಪರಮೇಶ್ ಸೇರಿದಂತೆ ಇತರರು ಭಾಗವಹಿಸಿದ್ದರು.

## ಫಾಸ್ಟ್ ನ್ಯೂಸ್

### ಸಾಮಾಜಿಕ ಹರಿಕಾರ ಬಸವಣ್ಣ: ಯೋಗೀಶ್



» ಹೊಸದುರ್ಗ

12 ನೇ ಶತಮಾನ ಎಂದರೆ ಅದು ಶಿವ ಶರಣರ ಸಂಕುಲ 12 ನೇ ಶತಮಾನದಲ್ಲಿ ಸಮಾಜದ ಅನಾಚರಗಳಿಗೆ ವಿರುದ್ದವಾಗಿ ವಚನ ಸಾಹಿತ್ಯದ ಮೂಲಕ ಉತ್ತರ ನೀಡಿದಂತವರು ಬಸವಣ್ಣನವರು, 12 ನೇ ಶತಮಾನದ ಸಾಮಾಜಿಕ ಹರಿಕಾರ ಎಂದರೆ ಅದು ಜಗಜ್ಯೋತಿ ಬಸವಣ್ಣನವರು ಎಂದು ಪುರಸಭಾ ಪ್ರಭಾರ ಮುಖ್ಯಾಧಿಕಾರಿ ಯೋಗೀಶ್ ತಿಳಿಸಿದರು. ಪಟ್ಟಣದ ಪುರಸಭಾ ಸಭಾಂಗಣದಲ್ಲಿ ಬುಧವಾರ ಆಯೋಜಿಸಲಾಗಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಶ್ರೀ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದರು. ಅನುಭವ ಮಂಟಪದಲ್ಲಿ ಸರ್ವ ಶರಣರಿಗೂ ಸಮಾನತೆಯನ್ನ ಕೊಟ್ಟಂತವರು ಬಸವಣ್ಣನವರು ಶತ–ಶತಮಾನಗಳಿಂದ ಶೋಷಣೆಗೆ ಒಳಪಟ್ಟಿದ್ದ ಸ್ತ್ರೀ ಸಮುದಾಯದ ಧ್ವನಿಯಾಗಿದ್ದರು. ಲಿಂಗಬೇದದ ವಿರುದ್ದ ಸಿಡಿದೇಳುವ ಮೂಲಕ ಸ್ತ್ರೀ ಸ್ವಾತಂತ್ರ್ಯ ಪ್ರತಿಪಾದನೆ ಮಾಡಿದವರು ಎಂದರೆ ಅದು 12 ನೇ ಶತಮಾನದ ಬಸವಣ್ಣನವರು ಇವರು ವಿಶ್ವಮಾನವರಾಗಿ, ಸಾಂಸ್ಕೃತಿಕ ರಾಯಭಾರಿ ಬಸವಣ್ಣನವರು ಮಹಾನ್ ವ್ಯಕ್ತಿ ಮತ್ತು ಶಕ್ತಿ ಯಾಗಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಪುರಸಭಾ ಅಧ್ಯಕ್ಷೆ ರಾಜೇಶ್ವರಿ, ಉಪಾಧ್ಯಕ್ಷೆ ಗೀತಾ, ಸದಸ್ಯರುಗಳಾದ ದೊಡ್ಡಯ್ಯ,ಹೆಚ್.ರಾಮಚಂದ್ರಪ್ಪ, ಮಾಷಾಸಾಬ್,ಡಿ.ರಾಮಚಂದ್ರಪ್ಪ ಸೇರಿದಂತೆ ಪುರಸಭಾ ನೌಕರರು ಮತ್ತು ಸಿಬ್ಬಂಧಿ ವರ್ಗದವರು ಉಪಸ್ಥಿತರಿದ್ದರು.

### ಮಾದಿಗ ಸಮುದಾಯಕ್ಕೆ ಒಳಮೀಸಲಾತಿಗಾಗಿ ಸಮೀಕ್ಷೆ : ಮಾದಿಗ ಎಂದು ಬರೆಸುವಂತೆ ಸಮುದಾಯದಲ್ಲಿ ಜಾಗೃತಿ



» ಚಳ್ಳಕೆರೆ

ಮೇ.5ರಿಂದ ನಡೆಯುವ ಒಳಮೀಸಲಾತಿ ಸಮೀಕ್ಷೆಯಲ್ಲಿ ಪ್ರತಿಯೊಬ್ಬರೂ ಮಾದಿಗ ಎಂದು ನಮೂದಿಸಿ ಒಳಮೀಸಲಾತಿ ಜಾರಿಗೆ ಕೈಜೋಡಿಸಬೇಕೆಂದು ಜಿಲ್ಲಾಮಾದಿಗ ನೌಕರರ ಸಾಂಸ್ಕೃತಿಕ ಸಂಘದ ಜಿಲ್ಲಾಧ್ಯಕ್ಷ ಡಿ.ಟಿ.ಶ್ರೀನಿವಾಸ್ ತಿಳಿಸಿದರು. ಅವರು, ಬುಧವಾರ ತಾಲ್ಲೂಕಿನ ಪರಶುರಾಮಪುರ ಹೋಬಳಿ ಹಾಗೂ ನಗರದ ಗಾಂಧಿನಗರ, ಅಂಬೇಡ್ಕರ್‌ನಗರ, ಹಳೇಟೌನ್ ಮುಂತಾದ ಪ್ರದೇಶಗಳಿಗೆ ಸಮುದಾಯದ ಮುಖಂಡರೊಂದಿಗೆ ತೆರಳಿ ಜಾಗೃತಿ ಮೂಡಿಸಿದರು. ಕಳೆದ ಹಲವಾರು ವರ್ಷಗಳ ಹೋರಾಟಕ್ಕೆ ಫಲಸಿಗುವ ಸಂದರ್ಭದಲ್ಲಿ ಯಾರೂ ಸಹ ಸಮೀಕ್ಷೆಯಲ್ಲಿ ಲೋಪವಾಗದಂತೆ ಜಾಗ್ರತೆ ವಹಿಸಬೇಕು ಎಂದರು. ಎಐಟಿಯುಸಿ ರಾಜ್ಯ ಸಂಚಾಲಕ ಸಿ.ವೈ.ಶಿವರುದ್ರಪ್ಪ ಮಾತನಾಡಿ, 40 ವರ್ಷಗಳ ಹೋರಾಟಕ್ಕೆ ಸರ್ಕಾರ ಕೊನೆಗೂ ಮಣಿದಿದೆ. ಒಳಮೀಸಲಾತಿ ನೀಡುವ ಕುರಿತು ಸರ್ಕಾರ ಈಗಾಗಲೇ ಮತ್ತೊಮ್ಮೆ ಸಮೀಕ್ಷೆ ನಡೆಸಲು ಸೂಚನೆ ನೀಡಿದೆ. ಎರಡ್ಮೂರು ದಿನಗಳಲ್ಲಿ ಅಧಿಕಾರಿಗಳು ಸಮೀಕ್ಷೆ ಕಾರ್ಯ ಆರಂಭಿಸಲಿದ್ದಾರೆ. ಸಮೀಕ್ಷೆ ಸಂದರ್ಭದಲ್ಲಿ ಪ್ರತಿಯೊಬ್ಬರೂ ಹಾಜರಿದ್ದು ನಿಖರ ಮಾಹಿತಿ ನೀಡಬೇಕು ಎಂದರು.

ಸಮಾಜ ಕಲ್ಯಾಣ ಇಲಾಖೆ ನಿವೃತ್ತ ಅಧಿಕಾರಿ ಡಿ.ದಯಾನಂದ ಮಾತನಾಡಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬಿ.ಪಿ.ಪ್ರಕಾಶ್‌ಮೂರ್ತಿ ನೇತೃತ್ವದಲ್ಲಿ ಜಿಲ್ಲೆಯಾದ್ಯಂತ ಜಾಗೃತಿ ಮೂಡಿಸುವ ಕಾರ್ಯ ಆರಂಭಿಸಿವೆ. ಶೋಷಣೆಯಿಂದ ತತ್ತರಿಸಿದ್ದ ಮಾದಿಗ ಸಮುದಾಯಕ್ಕೆ ಅಂಬೇಡ್ಕರ್‌ರವರ ಸಮಾನತೆಯ ಕನಸು ನನಸಾಗಲು ಒಳಮೀಸಲಾತಿ ಅಗತ್ಯವಿದೆ. ಈ ನಿಟ್ಟಿನಲ್ಲಿ ಎಲ್ಲೆಡೆ ಹೋಗಿ ಸಮುದಾಯದಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ ಮುಂದಿನ ದಿನಗಳಲ್ಲಿ ಒಳಮೀಸಲಾತಿ ಜಾರಿಯಿಂದ ಇನ್ನೂ ಹೆಚ್ಚಿನ ಸೌಲಭ್ಯ ನಮಗೆ ದೊರಕಲಿವೆ ಎಂದರು.

ನಗರಸಭೆ ಸದಸ್ಯ ಕೆ.ವೀರಭದ್ರಪ್ಪ, ನಗರಸಭೆ ಮಾಜಿ ಉಪಾಧ್ಯಕ್ಷ ಟಿ.ವಿಜಯಕುಮಾರ್ ಡಿ.ಟಿ.ಹನುಮಂತರಾಯ, ನಾಮಿನಿ ಸದಸ್ಯ ಆರ್.ವೀರಭದ್ರ, ಜಿ.ಮಾರಣ್ಣ, ಟಿ.ಜಯಣ್ಣ, ದ್ಯಾವರನಹಳ್ಳಿತಿಪ್ಪೇಸ್ವಾಮಿ ಉಪಸ್ಥಿತರಿದ್ದರು.

### ಆಯ್ಕೆ ಪ್ರಕ್ರಿಯೆ

» ದಾವಣಗೆರೆ

ಖೇಲೋ ಇಂಡಿಯಾ ರಾಜ್ಯ ಉತ್ಕೃಷ್ಟತಾ ಕೇಂದ್ರ, ವಿದ್ಯಾನಗರ ಬೆಂಗಳೂರು ಇಲ್ಲಿನ ತರಬೇತಿ ಕೇಂದ್ರಕ್ಕೆ ಅಥ್ಲೆಟಿಕ್ಸ್ ಕ್ರೀಡೆಯಲ್ಲಿ ಪ್ರತಿಭಾನ್ವಿತರಾಗಿರುವ ಹಾಗೂ ಪ್ರತಿಭೆಗಳನ್ನು ಆಯ್ಕೆ ಮಾಡುವ ಸಲುವಾಗಿ ಜಯಪ್ರಕಾಶ್ ನಾರಾಯಣ ರಾಷ್ಟ್ರೀಯ ಯುವ ತರಬೇತಿ ಕೇಂದ್ರ ಕ್ರೀಡಾ ಶಾಲೆ, ವಿದ್ಯಾನಗರ, ಬೆಂಗಳೂರು ಕೇಂದ್ರದಲ್ಲಿ ಮೇ.5 ಮತ್ತು 6 ರಂದು ಆಯ್ಕೆ ಪ್ರಕ್ರಿಯೆಯನ್ನು ಏರ್ಪಡಿಸಲಾಗಿದೆ.

### ಬಸವ ಜಯಂತಿ ಕಾರ್ಯಕ್ರಮದಲ್ಲಿ ಶ್ರೀ ಡಾ. ಬಸವಪ್ರಭು ಸ್ವಾಮೀಜಿ

# ಜಗತ್ತಿನಲ್ಲಿನ ಅಸಮಾನತೆಯ ಕಗ್ಗತ್ತಲನ್ನು ಹೊಡೆದೋಡಿಸಿದ್ದು ವಿಶ್ವಗುರು ಬಸವಣ್ಣ

» ದಾವಣಗೆರೆ

ಕತ್ತಲನ್ನು ಹೊಡೆದೋಡಿಸುವ ಶಕ್ತಿ ದೀಪಕ್ಕಿದೆ. ಆದರೆ ಜಗತ್ತಿನಲ್ಲಿನ ತುಂಬಿದ್ದ ಅಸಮಾನತೆಯ ಕಗ್ಗತ್ತಲು, ಒಂದು ಜಾತಿ ಶ್ರೇಷ್ಠ. ಮತ್ತೊಂದು ಜಾತಿ ಕನಿಷ್ಠ ಎಂಬುದರ ವಿರುದ್ಧ 12ನೇ ಶತಮಾನದಲ್ಲಿಯೇ ಸಮಾನತೆಗಾಗಿ ಹೋರಾಡಿದವರು ಸಾಂಸ್ಕೃತಿಕ ನಾಯಕ ವಿಶ್ವಗುರು ಬಸವಣ್ಣ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬುಧವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ವಿಶ್ವಗುರು ಸಾಂಸ್ಕೃತಿಕ ನಾಯಕ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಅವರು ಆಶೀರ್ವಚನ ನೀಡಿದರು.

ಅಂದು ಗಾಂಧೀಜಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದರೆ, ಬಸವಣ್ಣನವರು ಸಂವಿಧಾನ ಹೇಳುವಂತೆ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ತತ್ವದಡಿಯಲ್ಲಿ ಶೋಷಣೆ, ಸ್ವಾತಂತ್ರ್ಯ, ಸಮಾನತೆ, ಅಸ್ಪೃಶ್ಯತೆ ವಿರುದ್ಧ ಹೋರಾಡಿದ ಜಗಜ್ಯೋತಿ ಮಹಾನ್ ಪುರುಷ ಬಸವಣ್ಣ. ಹಾಗಾಗಿ ಅವರನ್ನು ವಿಶ್ವದ ಮೊದಲ ಸಮಾನತೆಯ ಹರಿಕಾರ, ಮಾನವ ಹಕ್ಕುಗಳ ಹೋರಾಟಗಾರ, ಮಹಾನ್ ಮಾನವತವಾದಿ ಎಂತಲೂ ಕರೆದಲ್ಲಿ ತಪ್ಪಾಗಲಾರದು. ಇಂತಹ ವ್ಯಕ್ತಿಗೆ ಸರ್ಕಾರ ಸಾಂಸ್ಕೃತಿಕ ನಾಯಕ ಹಾಗೂ



ಜನತೆ ವಿಶ್ವಗುರು ಎಂದು ಗೌರವಿಸಿದೆ.

ತಮ್ಮ ಕಾಯಕ ದಾಸೋಹದ ಮೂಲಕ ಕಾಯಕ ತತ್ವವನ್ನು ಜಗತ್ತಿಗ ಸಾರಿದ ಅವರು, ಕಾಯಕ ತತ್ವದಲ್ಲಿ ಮೇಲು–ಕೀಳೆಂಬುದಿಲ್ಲ. ಕಾಯಕದಿಂದ ಮಾತ್ರ ಬದುಕು ಹಸನಾಗಲು ಸಾಧ್ಯ. ಆದ್ದರಿಂದ ವ್ರತ ನಿಂತರೂ, ಕಾಯಕ ಸೇವೆ ನಿಲ್ಲಬಾರದು. ಕಾಯಕ ದಾಸೋಹ ನಿಷ್ಠೆಯಿಂದಲೇ ಆತ್ಮ ತೃಪ್ತಿ ಹೊಂದಬೇಕು. ಇಂತಹ ಮಹಾನ್ ವ್ಯಕ್ತಿತ್ವವುಳ್ಳ ಜಗಜ್ಯೋತಿ, ಬಸವ ತತ್ವಗಳನ್ನು ಅಳವಡಿಸಿಕೊಂಡಲ್ಲಿ ಜೀವನದಲ್ಲಿ ಶಾಂತಿ, ಸುವ್ಯವಸ್ಥೆ, ಪ್ರೀತಿ–ಸಹಬಾಳ್ವೆಯಿಂದ ಬಾಳಲು ಸಾಧ್ಯ. ಇವರ ತತ್ವಾದರ್ಶಗಳು ಇಂದಿನ ಪೀಳಿಗೆಗೆ ಅತ್ಯಗತ್ಯ ಎಂದರು.

ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಮಾತನಾಡಿ, ವಿಶ್ವದಲ್ಲಿ ಕಾಯಕ ದಾಸೋಹದ ಮೂಲಕ ತನ್ನದ ಆದ ಛಾಪು ಮೂಡಿಸಿದ ಮಹಾನ್ ದಾರ್ಶನಿಕ ವಿಶ್ವಗುರು ಬಸವಣ್ಣ. ಶರಣ ಬಸವೇಶ್ವರರು 12ನೇ ಶತಮಾನದ ಅನುಭವ ಮಂಟಪದಲ್ಲಿ ಎಲ್ಲಾ ಸಮಾಜದ ಶರಣ, ಶರಣೆಯರನ್ನು ಒಳಗೊಂಡಿತ್ತು. ಅದರಂತೆ ಮುಂಬರುವ ದಿನಗಳಲ್ಲಿ ಎಲ್ಲಾ ಸಮಾಜ ಹಾಗೂ ಶರಣರ ಸಮಾಗಮದೊಂದಿಗೆ ಆಚರಣೆ ಮಾಡಿದಲ್ಲಿ ಅದಕ್ಕೊಂದು ಅರ್ಥಪೂರ್ಣ. ಬಸವಣ್ಣನವರು ಸಮಾಜಕ್ಕೆ ನೀಡಿದ ಅಪಾರ ಕೊಡುಗೆಗೆ ಸರ್ಕಾರವು "ವಿಶ್ವಗುರು ಸಾಂಸ್ಕೃತಿಕ ನಾಯಕ" ಎಂದು ಘೋಷಿಸಿದೆ. ಬಸವಣ್ಣನವರು ಅಜ್ಞಾನದಿಂದ ಜ್ಞಾನದ ಕಡೆಗೆ ಕರೆತಂದ ಸಾಂಸ್ಕೃತಿ ನಾಯಕ ಎಂದರು.

ಜಿಲ್ಲಾಧಿಕಾರಿ ಜಿ.ಎಂ.ಗಂಗಧರಸ್ವಾಮಿ ಮಾತನಾಡಿ, ಸಮಾಜದಲ್ಲಿ ಬದಲಾವಣೆ ತರಲು, 12ನೇ ಶತಮಾನದಲ್ಲಿ ಅವರು ಮೂಡನಂಬಿಕೆ, ಅಸಮಾನತೆ, ವಿರುದ್ಧ ಹೋರಾಡಿದ ನೇತಾರ. ಸಮಾಜದಲ್ಲಿ ಪ್ರಸ್ತುತ ಹಿಂಸಾತ್ಮಕ ದಾಳಿಯಿಂದ ಕೂಡಿದೆ. ಹಾಗಾಗಿ ಬಸವಣ್ಣನವರು ಹೇಳಿದ "ಧಯವೇ ಧರ್ಮದ ಮೂಲವಯ್ಯಾ" ಎಂಬ ವಚನವನ್ನು ಅರ್ಥ ಮಾಡಿಕೊಡಲ್ಲಿ ಪ್ರತಿಯೊಬ್ಬರು ಶಾಂತಿ, ಸುವ್ಯವಸ್ಥೆಯಿಂದ ಜೀವನ ಸಾಗಿಸಬಹುದು. ಬಸವಣ್ಣ ಸೇರಿದಂತೆ ಪ್ರಥಮ ಬಸವಾಧಿ ಶರಣರು ನಡೆದು ಬಂದ ಹಾದಿಯನ್ನು ಅನುಸರಿಸಿದಲ್ಲಿ, ನಾಡು–ನುಡಿ, ದೇಶ– ವಿದೇಶಗಳು ಸಹ ಶಾಂತಿಯುತವಾಗಿ ಅಭಿವೃದ್ಧಿಯ ಪಥದತ್ತ ಸಾಗಲಿವೆ. ಲಂಡನ್‌ನ ರಾಜ, ರಾಣೀಯರ ಆಳ್ವಿಕೆ ಪರಂಪರೆಯಾಗಿದ್ದು, ಅಲ್ಲಿನ ಅಥೆನ್ಸ್ ನಗರದಲ್ಲಿ ಕಲಬುರರ್ಗಿಯ ನೀರಜ್ ಪಾಟಿಲ್‌ರವರು ಬಸವಣ್ಣನವರ ಪ್ರತಿಮೆಯನ್ನು ಸ್ಥಾಪಿಸಿರುವುದು ಹೆಮ್ಮೆಯ ಸಂಗತಿ. ಸಮಾಜದಲ್ಲಿನ ಬಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಬಸವಾದಿಶರಣರು ಸಾರಿದ ಮಾನವತೆ, ಮಾನವಧರ್ಮ ಮುಂತಾದ ತತ್ವಾದರ್ಶಗಳನ್ನು ಪ್ರತೊಯೊಬ್ಬರು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಬಸವ ಕಲಾ ಲೋಕ ತಂಡದಿಂದ ಗೀತಗಾಯನ ಪ್ರಸ್ತುತಪಡಿಸಿದರು.

ಈ ವೇಳೆ ಜಿಲ್ಲಾ ಪಂಚಾಯತ್ ಸಿಇಒ ಸುರೇಶ್ ಬಿ ಇಟ್ನಾಳ್, ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ವಿಜಯ ಕುಮಾರ್ ಎಂ ಸಂತೋಷ್, ದೂಡಾ ಅಧ್ಯಕ್ಷ ದಿನೇಶ್ ಕೆ ಶೆಟ್ಟಿ, ಸನೆಟ್ ಸದಸ್ಯ ಪ್ರಶಾಂತ್, ಎಂ.ಶಿವಕುಮಾರ್, ಪರಮೇಶ್ವರಪ್ಪ ಸೇರದಂತೆ ಸಮಾಜದ ಮುಖಂಡರು ಉಪಸ್ಥಿತರಿದ್ದರು.




ಚಿತ್ರದುರ್ಗ ಬಸವ ಜಯಂತಿ ಅಂಗವಾಗಿ ಇಂದು ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಜಗಜ್ಯೋತಿ ಶ್ರೀ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಗೌರವ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಕೆ ಎಸ್ ನವೀನ್ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ರಾಮದಾಸ್ ಬಾಳೇಕಾಯಿ, ಜಿ.ಎಸ್ ಸಂಪತ್ ಕುಮಾರ್ ಬಿಜೆಪಿ ಯುವ ಮುಖಂಡರಾದ ಸಿದ್ದಾರ್ಥ್, ಜಿಲ್ಲಾ ಕಾರ್ಯಾಲಯ ಕಾರ್ಯದರ್ಶಿಶಂಭು ಜೆ ಎಸ್, ಎಸ್ ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಪಾಂಡು, ಗ್ರಾಮಾಂತರ ಮಂಡಳದ ಅಧ್ಯಕ್ಷರಾದ ನಾಗರಾಜ್, ಮಾಜಿ ಗ್ರಾಮಾಂತರ ಮಂಡಲದ ಅಧ್ಯಕ್ಷರಾದ ಕಲ್ಲೇಶಯ್ಯ, ಕಿರಣ್, ಮಹಾಂತೇಶ್, ಓಂಕಾರಪ್ಪ, ಪಾಪಣ್ಣ ಉಪಸ್ಥಿತರಿದ್ದರು.

## ಮೂಢನಂಬಿಕೆ, ಕಂದಾಚಾರಗಳ ವಿರುದ್ದ ವಚನಗಳ ಮೂಲಕವೇ ಜಾಗೃತಿ ಮೂಡಿಸಿದವರು ಬವಸವಣ್ಣನವರು: ಟಿ.ರಘುಮೂರ್ತಿ

ಚಳ್ಳಕೆರೆ: ನಗರದ ಬಳ್ಳಾರಿ ರಿಂಗ್ ರಸ್ತೆಯಲ್ಲಿರುವ ಬಸವಮಂಟಪದಲ್ಲಿ ರಾಷ್ಟ್ರೀಯ ಬಸವದಳ ಟ್ರಸ್ಟ್ ಗ್ರಾಮಾಂತರ ಬಸವದಳ ಒಕ್ಕೂಟ ಸಹಯೋಗದಲ್ಲಿ ವಿಶ್ವಗುರು ಬಸವೇಶ್ವರರ ಜಯಂತಿ ಕಾರ್ಯಕ್ರಮವನ್ನು ಸಂಭ್ರಮ ಸಡಗರಗಳಿಂದ ನಡೆಸಿದರು.

ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರ ಶಾಸಕ, ಸಣ್ಣಕೈಗಾರಿಕೆ ಅಭಿವೃದ್ಧಿಮಂಡಳಿ ಅಧ್ಯಕ್ಷ ಟಿ.ರಘುಮೂರ್ತಿ, ಜಗಜ್ಯೋತಿ ಬಸವಣ್ಣನವರು ಸಮಸ್ತ ಮಾನವ ಸಮಾಜದ ಕಲ್ಯಾಣಕ್ಕಾಗಿ ಶ್ರಮಿಸಿದವರು. ಜಾತಿ, ಜಾತಿನಡುವೆ ಇದ್ದ ಅಸಮಾನತೆ ಹಾಗೂ ದ್ವೇಷದ ಭಾವನೆಯನ್ನು ಶಮನಗೊಳಿಸಲು ತಮ್ಮ ವಚನಗಳ ಮೂಲಕವೇ ಜಾಗೃತಿ ಮೂಡಿಸಿದವರು. ಬಸವಣ್ಣನವರ ಅಂದಿನ ಕಾರ್ಯ ಇಂದಿಗ ಸ್ವಾಸ್ಥ್ಯ ಸಮಾಜಕ್ಕೆ ನಾಂದಿಯಾಗಿದೆ ಎಂದರು.

ಪತ್ರಕರ್ತ ಕೊರ್ಲಕುಂಟೆತಿಪ್ಪೇಸ್ವಾಮಿ ಉಪನ್ಯಾಸ ನೀಡಿ, ಜಗಜ್ಯೋತಿ ಬಸವಣ್ಣವರು ಜ್ಞಾನದ ಭಂಡಾರವಾಗಿದ್ದು. ಬಾಲ್ಯದಲ್ಲಿಯೇ ಸಮಾಜದಲ್ಲಿನ ಏರುಪೇರುಗಳ ಬಗ್ಗೆ ಸೂಕ್ಷ್ಮವಾಗಿ ಗಮನಿಸಿ ಸಮಾನತೆಯನ್ನು ತರುವ ನಿಟ್ಟಿನಲ್ಲಿ ಚಿಂತನೆ ನಡೆಸಿದವರು. ಮೂಢನಂಬಿಕೆ, ಕಂದಾಚಾರಗಳ ವಿರುದ್ದ ಸಮಾಜದಲ್ಲಿ ವಚನಗಳ ಮೂಲಕವೇ ಜಾಗೃತಿ ಮೂಡಿಸಿದವರು



ಎಂದರು. ನಗರಸಭೆ ಅಧ್ಯಕ್ಷೆ ಆರ್.ಮಂಜುಳಾಪ್ರಸನ್ನಕುಮಾರ್, ಉಪಾಧ್ಯಕ್ಷೆ ಸುಮಭರಮಣ್ಣ, ಸದಸ್ಯ ರಮೇಶ್‌ಗೌಡ, ಬಸವದಳ ಟ್ರಸ್ಟ್ ಅಧ್ಯಕ್ಷ ಎಂ.ಟಿ.ಗೋಕರ್ಣ, ಕಾರ್ಯದರ್ಶಿ ಎಂ.ಎಸ್.ತಿಪ್ಪೇಸ್ವಾಮಿ, ಆರ್.ರಂಗಸ್ವಾಮಿ, ವೀಣಾಸುರೇಶ್, ಲತಾಪ್ರಕಾಶ್, ತಿಪ್ಪಮ್ಮರವಿ, ಜ್ಯೋತಿನಾಗರಾಜು, ಯರ್ರಿಸ್ವಾಮಿ, ಜ್ಯೋತಿಪ್ರಭು, ಪರಶುರಾಮಪುರಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಟಿ.ಶಶಿಧರ ಮುಂತಾದವರುಉಪಸ್ಥಿತರಿದ್ದರು.

## ಬಸವಣ್ಣ ವಚನ ಅಧ್ಯಾಯನದಿಂದ ಜೀವನ ಪರಿವರ್ತನೆ ಸಾಧ್ಯ-ಪಾಟೀಲ್



» ಹೊಸದುರ್ಗ

ವಿಶ್ವಗುರು ಬಸವೇಶ್ವರರು 12 ನೇ ಶತಮಾನದಲ್ಲಿ ಸಾವಿರ ವಚನಗಳನ್ನು ರಚನೆ ಮಾಡಿ ಸಮಾಜಕ್ಕೆ ಕೊಡುಗೆಯಾಗಿ ನೀಡಿದ್ದಾರೆ, ಸಮ ಸಮಾಜ ನಿರ್ಮಾಣ ಮಾಡಿದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ, ಬಸವಣ್ಣನರ ಅದರ್ಶಗಳನ್ನು ಪ್ರತಿಯೋಬ್ಬರೂ ಸಹಾ ಪಾಲನೆ ಮಾಡಬೇಕು ಬಸವಣ್ಣನವರು ರಚಿಸಿದ ವಚನಗಳ ಅಧ್ಯಾಯನದಿಂದ ಮನುಷ್ಯನ ಜೀವನ ಪರಿವರ್ತನೆ ಆಗಲು ಸಾಧ್ಯ ಎಂದು ತಹಶಿಲ್ದಾರ್ ಹಾಗೂ ಹಾಗೂ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯ ಅಧ್ಯಕ್ಷ ತಿರುಪತಿ ಪಾಟೀಲ್ ಅಭಿಪ್ರಾಯಿಸಿದರು.ಪಟ್ಟಣದ ತಾಲೂಕು ಆಡಳಿತದಿಂದ ಬುಧವಾರ ಆಯೋಜಿಸಲಾಗಿದ್ದ ಬಸವಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ವಿಶ್ವಗುರು ಬಸವಣ್ಣ ಅವರು ಯಾವುದೇ ಒಂದು ಧರ್ಮಕ್ಕೆ ಸೀಮಿತವಾದವರಲ್ಲ, ಅವರು ಇಡೀ ಮಾನವ ಕುಲಕೋಟಿಗೆ ಸಲ್ಲುವ ವ್ಯಕ್ತಿ ಎಂದರೆ ಅದು ಬಸವಣ್ಣ, 12 ನೇ ಶತಮಾನದ ಶಿವಶರಣರಲ್ಲಿ ಬಸವಣ್ಣನವರು ಅಗ್ರ ಗಣ್ಯರು, ಇಂದು ಕನ್ನಡ ಸಾಹಿತ್ಯ ಸಾಂಸ್ಕೃತಿಕ ಲೋಕ ಸಾಹಿತ್ಯ ಕ್ಷೇತ್ರದಲ್ಲಿ ಸಂವೃದ್ದವಾಗಿದೆ ಎಂದರೆ ಅದು ಬಸವಣ್ಣ ನೀಡಿದ ಕೊಡುಗೆ ಎಂದರು.ವೀರಶೈವ ಲಿಂಗಾಯಿತಿ ಸಮಾಜದ ಮುಖಂಡ ಹಾಗೂ ಎಸ್.ನಿಜಲಿಂಗಪ್ಪ ವಿದ್ಯಾ ಸಂಸ್ಥೆಯ ಕಾರ್ಯದರ್ಶಿ ಕೆ.ಎಸ್.ಕಲ್ಮಠ್ ಮಾತನಾಡಿ ಬಸವೇಶ್ವರರು ಮಾನವೀಯತೆಯ ಏಕತೆ, ಸಮಾನತೆ, ಸಹೋದರತ್ವವನ್ನು ವಿಶ್ವಾದ್ಯಂತ ಸಂದೇಶವನ್ನು ನೀಡಿದ್ದರಿಂದ ಸಮಕಾಲಿನ ಮತ್ತು ಪ್ರಗತಿಪರ ಸಮಾಜವನ್ನು ನಿರ್ಮಿಸಲು ಅತ್ಯಂತ ಪ್ರಸ್ತುತರಾಗಿದ್ದಾರೆ ಎಂದರು.ಕಾರ್ಯಕ್ರಮದಲ್ಲಿ ಲಿಂಗಾಯಿತ ವೀರಶೈವ ಮಹಸಭಾದ ತಾಲೂಕು ಘಟಕದ ಅಧ್ಯಕ್ಷ ಮಂಜುನಾಥ್, ನಿಕಟ ಪೂರ್ವ ಅಧ್ಯಕ್ಷ ಬಿ.ಪಿ.ಓಂಕಾರಪ್ಪ, ಮುಖಂಡರುಗಳಾದ ಶಶಿಧರ್,ಎಂ.ಬಿ.ತಿಪ್ಪೇಸ್ವಾಮಿ, ಮಂಜುನಾಥ್, ಸಿದ್ದರಾಮೇಶ್, ಕೋಡಿಹಳ್ಳಿತಮ್ಮಣ್ಣ, ಜಾದೂಮೋಹನ್,ಸಿಂಧುಅಶೋಕ್,ಕಾಂತರಾಜ್, ಸೇರಿದಂತೆ ಸಮಾಜದ ಮುಖಂಡರು ಹಾಗೂಈ ತಾಲೂಕು ಕಛೇರಿಯ ಸಿಬ್ಬಂಧಿ ವರ್ಗದವರು ಉಪಸ್ಥಿತರಿದ್ದರು.

**ಪ್ರಮುಖ ಸುದ್ದಿ**

# ಬಸವಣ್ಣ ವಚನಗಳು ಜೀವನದಲ್ಲಿ ಪರಿಪಾಲನೆಯಾಗಬೇಕು

» ಹೊಳಲ್ಕೆರೆ

ಜಗಜ್ಯೋತಿ ಬಸವಣ್ಣನವರ ವಚನಗಳನ್ನು ಬಾಯಲ್ಲಿ ಪಠಣ ಮಾಡಿದರೆ ಸಾಲದು. ಜೀವನದಲ್ಲಿ ಪರಿಪಾಲನೆಯಾಗಬೇಕೆಂದು ಶಾಸಕ ಡಾ.ಎಂ.ಚಂದ್ರಪ್ಪ ಹೇಳಿದರು.

ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಬಸವೇಶ್ವರರ ಜಯಂತಿಯಲ್ಲಿ ವಿಶ್ವಗುರು ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.

ಐವತ್ತು ವರ್ಷಗಳ ಹಿಂದೆ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಕೆಂಗಲ್ ಹನುಮಂತಯ್ಯನವರು ಕಾಯಕಕ್ಕೆ ಹೆಚ್ಚಿನ ಒತ್ತು ಕೊಟ್ಟಿದ್ದರು. ಅಂದಿನಿಂದ ಇಲ್ಲಿಯವರೆಗೂ ಅಂತಹ ಕೆಲಸ ಯಾವ ಸರ್ಕಾರದಿಂದಲೂ ಆಗಿಲ್ಲ. ರೈತರ ಬದುಕು ಕಷ್ಟದಲ್ಲಿದೆ. ಸಮಾಜ ಕಾಯಕವನ್ನು ಮರೆತಿದೆ. ಕಾಯಕವೇ ಜೀವನ. ಅದಕ್ಕಾಗಿ



ಕಾಯಕದ ಕಡೆ ಎಲ್ಲರೂ ಹೆಚ್ಚಿನ ಗಮನ ಕೊಡಬೇಕಿದೆ ಎಂದು ತಿಳಿಸಿದರು.

ಹನ್ನೆರಡನೆ ಶತಮಾನದಲ್ಲಿ ಬಸವಣ್ಣನವರು ಸಾವಿರಾರು ವಚನಗಳನ್ನು ಬರೆದು ಜಗಜ್ಯೋತಿಯಾದರು. ಕೇವಲ ಕರ್ನಾಟಕಕ್ಕಷ್ಟೆ ಅಲ್ಲ. ವಿಶ್ವಕ್ಕೆ ಸಮಾನತೆಯ ಸಂದೇಶವನ್ನು ಸಾರಿದವರು ಬಸವಣ್ಣ. ಲಂಡನ್‌ನಲ್ಲಿ ಬಸವಣ್ಣನವರ ಅದ್ಭುತವಾದ ಪ್ರತಿಮೆಯಿದೆ. ಅವರ ನಡೆ–ನುಡಿಯಂತೆ ಪ್ರತಿಯೊಬ್ಬರು ಬದುಕಬೇಕು. ವೀರಶೈವ ಲಿಂಗಾಯಿತ ಸಮಾಜ ದೊಡ್ಡದು. ಒಂದಾಗಬೇಕು. ಸಾಂಸ್ಕೃತಿಕ ನಾಯಕ ಬಸವಣ್ಣನವರ ಮಾರ್ಗದರ್ಶನದಂತೆ ಮನುಷ್ಯ ಬದುಕಬೇಕಿದೆ. ಎಂ.ಎಂ. ಕಲ್ಬುರ್ಗಿಯವರ ಹತ್ಯೆಯಾಯಿತು. ಇದುವರೆವಿಗೂ ಹತ್ಯೆಗೈದವರನ್ನು ಪತ್ತೆ ಹಚ್ಚಲು ಆಗಿಲ್ಲ. ನೀವುಗಳು ಒಳ್ಳೆಯ ಜಾಗ ಗುರುತು ಮಾಡಿದರೆ ಅದಕ್ಕೆ ಬೇಕಾದ ಸಂಪನ್ಮೂಲ ಕೊಡುತ್ತೇನೆಂದು ಶಾಸಕ ಡಾ.ಎಂ.ಚಂದ್ರಪ್ಪ ಭರವಸೆ ನೀಡಿದರು.

ಹೊಳಲ್ಕೆರೆ ತಹಶೀಲ್ದಾರ್ ಬೀಬಿ ಫಾತಿಮ, ಪುರಸಭೆ ಮುಖ್ಯಾಧಿಕಾರಿ ರೇಣುಕಾ ದೇಸಾಯಿ, ಅಧ್ಯಕ್ಷ ವಿಜಯಸಿಂಹ ಖಾಟ್ರೋತ್, ಉಪಾಧ್ಯಕ್ಷೆ ನಾಗರತ್ನ ವೇದಮೂರ್ತಿ

ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ಅಧ್ಯಕ್ಷ ಪ್ರಭಾಕರ್, ಮಾರುತೇಶ್, ಮಲ್ಲಿಕಾರ್ಜುನ್, ಜಗದೀಶ್ ನಾಡಿಗಾರ್, ವೀರೇಶ್, ಶಿವಕುಮಾರ್, ಪುರಸಭೆ ಸದಸ್ಯರುಗಳು, ವೀರಶೈವ ಸಮಾಜದ ಮುಖಂಡರುಗಳು ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಬಸವ ಜಯಂತಿಯಲ್ಲಿ ಭಾಗವಹಿಸಿದ್ದರು.

# ಕಾರ್ಮಿಕ ದಿನಾಚರಣೆಯ ಸೂಕ್ತತೆ: ಒಂದು ಅವಲೋಕನ



ವಿಶ್ವದ ಬಹುತೇಕ ರಾಷ್ಟ್ರಗಳಲ್ಲಿ ಕಾರ್ಮಿಕ ಸಂಘಗಳು, ವಿವಿಧ ಸಂಘಟನೆಗಳು ಮತ್ತು ಪಕ್ಷಗಳು ಮುಖ್ಯವಾಗಿ ಆಚರಿಸುವ ಸಂಭ್ರಮದ ಸಾರ್ವಜನಿಕ ಉತ್ಸವ ದಿನವೇ. ಮೇ ದಿನ ಅಥವಾ ಅಂತರಾಷ್ಟ್ರೀಯ ಕಾರ್ಮಿಕ ದಿನಾಚರಣೆ.

ಮೇ 4 1886 ರಂದು ಚಿಕಾಗೋದಲ್ಲಿ ಸಂಭವಿಸಿದ ಹೇಮಾರ್ಕೆಟ್ ವ್ಯವಹಾರದ ಸ್ಮರಣಾರ್ಥವಾಗಿ ಅಂತರರಾಷ್ಟ್ರೀಯ ಕಾರ್ಮಿಕರ ದಿನಕ್ಕಾಗಿ ಮೇ 1 ನ್ನು ಆಯ್ಕೆ ಮಾಡಲಾಯಿತು. ಶ್ರಮವು ನಮಗೆ ಸಂತೋಷವನ್ನು ನೀಡುವುದಲ್ಲದೆ ಅದು ನಮ್ಮನ್ನು ತೊಡಗಿಸಿಕೊಳ್ಳುವಂತೆ ಮಾಡುತ್ತದೆ ಮತ್ತು ಆರೋಗ್ಯಕರವಾಗಿರಿಸುತ್ತದೆ, ಇದು ನಮ್ಮನ್ನು ಕ್ರಿಯಾಶೀಲರನ್ನಾಗಿಸಲು ಸಹಾಯ ಮಾಡುತ್ತದೆ. ಶ್ರಮದಾಯಕಮನುಷ್ಯನಿಗೆಯಾವುದುಅಸಾಧ್ಯವಲ್ಲ. ಮನುಷ್ಯನ ಕಠಿಣ ಪರಿಶ್ರಮವೇ ಚಂದ್ರನ ಮೇಲೆ ಇಳಿಯಲು ಸಹಾಯ ಮಾಡಿತು ಎಲ್ಲಾ ವೈಜ್ಞಾನಿಕ ಆವಿಷ್ಕಾರಗಳು ತಮ್ಮ ಯಶಸ್ಸಿಗೆ ಕಾರ್ಮಿಕರಿಗೆ ಋಣಿ ಆಗಿರುತ್ತವೆ. ಒಂದು ಹಕ್ಕಿಯು ತನ್ನ ಆಹಾರವನ್ನು ಹುಡುಕಬೇಕು ಬಲಿಷ್ಠ ಸಿಂಹವು ತನ್ನ ಹಸಿವನ್ನು ನೀಗಿಸಿಕೊಳ್ಳಲು ಬೇಟೆಯಾಡಬೇಕಾಗುತ್ತದೆ ಆದ್ದರಿಂದ ನಾವು ಚಿಕ್ಕವಯಸ್ಸಿನಿಂದಲೇ ದುಡಿಮೆಯ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು. ಕೈ ಕೆಸರಾದರೆ ಬಾಯಿ ಮೊಸರು ಎಂಬ ತತ್ವದಲ್ಲಿ ನಂಬಿಕೆಯನ್ನು ಇರಿಸಬೇಕು. ಕಾರ್ಮಿಕರ ಕಲ್ಯಾಣಕ್ಕಾಗಿ ಮೀಸಲಿರುವ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಮೂಲಕ ಸಮಾಜ, ಸರ್ಕಾರ, ಸಂಘ –ಸಂಸ್ಥೆಗಳು ಕಾರ್ಮಿಕ ಸ್ನೇಹಿಯಾಗಿ ಕಾರ್ಯನಿರ್ವಹಿಸಬೇಕಾಗಿದೆ.

ಕಾರ್ಮಿಕರ ಕಲ್ಯಾಣಕ್ಕಾಗಿ ಹಲವು ಸಾಮಾಜಿಕ ನಾಯಕರಾದ ಕಾರ್ಲಮಾರ್ಕ್ಸ್, ಲೆನಿನ್ ಮತ್ತು ಡಾ. ಬಿ.ಆರ್ ಅಂಬೇಡ್ಕರ್ ರಂತಹ ಅನೇಕ ಹೋರಾಟಗಾರರು ಹೋರಾಡಿದ್ದಾರೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಋಟಿಣಜಡಿಟಿಚಿಣುಟಿಚಿಟ ಐಚಿಛಠಣಾಡಿ ಔಡಿರಚಿಟಿಮಿದಚಿಣುಠಟಿ)ಯು ಕೆಲಸ ಮಾಡುವ ಪುರುಷರು ಮತ್ತು ಮಹಿಳೆಯರ ಅಗತ್ಯತೆಗಳನ್ನು ಪೂರೈಸುವ ನೀತಿಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸುತ್ತದೆ, ಮತ್ತು ಎಲ್ಲಾ ಕಾರ್ಮಿಕರಿಗೆ ಸಮಾನಾವಕಾಶವನ್ನು ಖಚಿತಪಡಿಸುತ್ತದೆ.

ಭಾರತದಲ್ಲಿ ಆರ್ಥಿಕ ಅಭಿವೃದ್ಧಿ, ಸಾಮಾಜಿಕ ನ್ಯಾಯ, ಕೈಗಾರಿಕಾ ಸಾಮರಸ್ಯ ಮತ್ತು ಕಾರ್ಮಿಕರ ಕಲ್ಯಾಣವನ್ನು ಕಾಪಾಡಿಕೊಳ್ಳಲು ಕಾರ್ಮಿಕ ನೀತಿಗಳನ್ನು ರೂಪಿಸಲಾಗಿದೆ. ಈ ಚಟುವಟಿಕೆಗಳನ್ನು ಉತ್ತೇಜಿಸಲು ಸರ್ಕಾರವು ವಿವಿಧ ಸುಧಾರಣೆಗಳು ಮತ್ತು ಕ್ರಮಗಳನ್ನು ತರಲಾಗಿದೆ. ಈ ಕಾರ್ಯಕ್ರಮಗಳು, ಯೋಜನೆಗಳು , ಕಾರ್ಮಿಕ ಕಲ್ಯಾಣ ನಿಯಮಗಳು, ಕಾನೂನುಗಳು, ಹಾಗು ಸೇವೆಗಳು ಇತ್ಯಾದಿಗಳನ್ನು ಒಳಗೊಂಡಿವೆ.

### ಕಾರ್ಮಿಕರ ಕಲ್ಯಾಣಕ್ಕಾಗಿ ಲಭ್ಯವಿರುವ ಯೋಜನೆಗಳು

1. ಗರೀಬ್ ಕಲ್ಯಾಣ್ ರೋಜ್ಗಾರ್ ಯೋಜನ
2. ಪ್ರಧಾನಮಂತ್ರಿ ಶ್ರಮಯೋಗಿ ಮಾನ್ ಧನ್ ಯೋಜನೆ
3. ಪ್ರಧಾನಮಂತ್ರಿ ರೋಜಾರ್ ಪ್ರೋತ್ಸಾಹ ಯೋಜನ
4. ಆಮ್ ಆದ್ಮಿ ಬೀಮಾ ಯೋಜನೆ
5. ಅಟಲ್ ಬಿಮಿತ್ ವ್ಯಕ್ತಿ ಕಲ್ಯಾಣ ಯೋಜನೆ
6. ಬಂಧಿತ ಕಾರ್ಮಿಕರ ಪುನರ್ವಸತಿಗಾಗಿ ಕೇಂದ್ರ ವಲಯ ಯೋಜನೆ 2016.
7. ಸ್ವ ಉದ್ಯೋಗಕ್ಕಾಗಿ ಗತಿದಾರಾ ಯೋಜನೆ
8. ಮಹಿಳಾ ಕಾರ್ಮಿಕರ ಕಲ್ಯಾಣಕ್ಕಾಗಿ ಎನ್.ಜಿ.ಒ.ಗಳಿಗೆ ಸಹಾಯ ಯೋಜನೆಯಲ್ಲಿ ಅನುದಾನ ನೀಡುವುದು
9. ಅಟಲ್ ಪಿಂಚಣಿ ಯೋಜನೆ.
10. ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆ
11. ಪರಿಷ್ಕೃತ ಸಂಯೋಜಿತ ವಸತಿ ಯೋಜನೆ
12. ಮಹಾತ್ಮ ಗಾಂಧಿ ಬಂಕರ್ ಬೀಮಾ ಯೋಜನ
13. ದೀನದಯಾಳ್ ಉಪಾಧ್ಯಾಯ ಅಂತ್ಯೋದಯ ಯೋಜನೆ

ಮಹಾನ್ ಡಾ. ಭೀಮರಾವ್ ರಾಮಜಿ ಅಂಬೇಡ್ಕರ್ ಅವರು ಭಾರತೀಯ ಸಂವಿಧಾನದ ನಿರ್ಮಾಪಕರು ಮಾತ್ರವಲ್ಲದೆ ಭಾರತದ ಕಾರ್ಮಿಕ ಕಾನೂನು ಸುಧಾರಣೆಗಳ ದೂರದೃಷ್ಟಿಯ ವಾಸ್ತುಶಿಲ್ಪಿ ಕೂಡಾ ಆಗಿದ್ದರು. ಅವರು ಭಾರತೀಯ ಕಾರ್ಮಿಕರ ಸಂರಕ್ಷಕರಾಗಿದ್ದರು ಮೂಲಭೂತ ಹಕ್ಕುಗಳು ಜನರ ಆರ್ಥಿಕ ಜೀವನದ ಮೇಲೆ ಹೊಂದಿರುವ ನಿಯಂತ್ರಣವನ್ನು ತೆಗೆದುಹಾಕಬೇಕು. ಕಾರ್ಮಿಕ ಕಾನೂನುಗಳ ಉದ್ದೇಶ ಬಂಡವಾಳಶಾಹಿಗಳು ಮತ್ತು ಕಾರ್ಮಿಕರ ನಡುವಿನ ಅಧಿಕಾರದ ಸಮತೋಲನವನ್ನುತಗ್ಗಿಸುವುದು ಇದುಸಾರ್ವಜನಿಕ ಮತ್ತು ಖಾಸಗಿ ವಲಯಗಳಲ್ಲಿ ಜೀವನ ಸ್ವಾತಂತ್ರ್ಯ ಮತ್ತು ಸಂತೋಷದ ಅನ್ವೇಷಣೆಯ ಹಕ್ಕುಗಳನ್ನು ಭದ್ರಪಡಿಸುವ ಗುರಿಯನ್ನು ಹೊಂದಿರಬೇಕು ಎಂದು ಅಂಬೇಡ್ಕರ್ ವಾದಿಸಿದರು.

ಅಂಬೇಡ್ಕರ್ ಅವರು ಮೊದಲ ಬಾರಿಗೆ ಕಾರ್ಮಿಕರಿಗೆ ದಿನಕ್ಕೆ ಎಂಟು ಗಂಟೆಗಳ ಕೆಲಸವನ್ನು ನಿಗದಿಪಡಿಸಿದರು. ಕಾರ್ಮಿಕರಿಗೆ ಕನಿಷ ವೇತನವನ್ನು ನಿಗದಿಪಡಿಸಲು ಡಾ ಅಂಬೇಡ್ಕರ್ ಅವರು 1942 ರಲ್ಲಿ' ಕನಿಷ್ಠ ವೇತನ ಕಾಯ್ದೆ'ಯನ್ನು ರಚಿಸಿದರು. ಡಾ ಅಂಬೇಡ್ಕರ್ ಅವರು 1944 ರಲ್ಲಿ ವೇತನ ಪಾವತಿ ಮಸೂದೆಯನ್ನು ಮಂಡಿಸಿದರು. ಸಾವಿನ ಭತ್ಯೆ, ಲೀವ್ ಬೆನಿಫಿಟ್, ಸ್ಕೂಲ್ ಆಫ್ ಪೇ ಪರಿಷ್ಕರಣೆ, ಹೆಚ್ಚುವರಿ ಅವಧಿಗೆ ಹೆಚ್ಚುವರಿ ಪಾವತಿ, ಸಬ್ಸಿಡಿ ಆಹಾರ ಇತ್ಯಾದಿಗಳು ಡಾ.ಅಂಬೇಡ್ಕರ್ ಅವರ ಕೊಡುಗೆಗಳಾಗಿವೆ.

ಅಂಬೇಡ್ಕರವರು 1923ರ ಕಾರ್ಮಿಕರ ಪರಿಹಾರ ಕಾಯ್ದೆಗೆ ತಿದ್ದುಪಡಿಯನ್ನು ತಂದರು. 1944 ರಲ್ಲಿ ಅಂಬೇಡ್ಕರ್ 1934 ರ ಕಾಯ್ದೆಗೆ ಹಲವಾರು ಮಾರ್ಪಾಡುಗಳೊಂದಿಗೆ ತಿದ್ದುಪಡಿಯನ್ನು ಪ್ರಾರಂಭಿಸಿದರು. ಕಾರ್ಖಾನೆಯೊಳಗೆ ಕ್ಯಾಂಟೀನ್ ಮತ್ತುವೈದ್ಯಕೀಯ ಸೌಲಭ್ಯಗಳನ್ನುಪರಿಚಯಿಸಿದರು. ಪೂರ್ವ ಏಷ್ಯಾದ ದೇಶಗಳಲ್ಲಿ ಉದ್ಯೋಗಿಗಳ ರಾಜ್ಯ ವಿಮಾ ಕಾಯ್ದೆಯ ಮೂಲಕ ಉದ್ಯೋಗಿಗಳ ಯೋಗಕ್ಷೇಮಕ್ಕಾಗಿ ವಿಮೆಯನ್ನು ತಂದ ಮೊದಲ ರಾಷ್ಟ್ರ ಭಾರತ. ಸಾಮಾಜಿಕ ವಿಮೆಯ ಮತ್ತು ಉದ್ಯೋಗಿಗಳ ಭವಿಷ್ಯನಿಧಿ ಕಾನೂನು ರಚನೆಗೆ ಅವರು ಕೊಡುಗೆ ನೀಡಿದ್ದಾರೆ.

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಮಹಿಳಾ ಕಾರ್ಮಿಕರಿಗಾಗಿ ಅನೇಕ ಕಾನೂನುಗಳನ್ನು ರಚಿಸಿದರು. ಅವುಗಳಲ್ಲಿ ಗಣಿ ಮಾತೃ ಪ್ರಯೋಜನ ಕಾಯ್ದೆ, ಮಹಿಳಾ ಕಾರ್ಮಿಕ ಕಲ್ಯಾಣ ನಿಧಿ, ಮಹಿಳೆ ಮತ್ತು ಬಾಲಕಾರ್ಮಿಕ ಸಂರಕ್ಷಣಾ ಕಾಯ್ದೆ, ಮಹಿಳಾ ಕಾರ್ಮಿಕರಿಗೆ ರಜೆ ಪ್ರಯೋಜನ ಹಾಗೆಯೇ ಕಲ್ಲಿದಲ್ಲಿನಲ್ಲಿ, ಸುರಂಗ ಕೆಲಸದಲ್ಲಿ ಮಹಿಳೆಯರ ಉದ್ಯೋಗದ ಮೇಲಿನ ನಿಷೇಧದ ಮರುಸ್ಥಾಪನೆ ಸೇರಿವೆ.

ಅಂಬೇಡ್ಕರ್ ಅವರು ಭಾರತದ ಕೌಶಲ್ಯ ಅಭಿವೃದ್ಧಿ ಪ್ರವರ್ತಕರಾಗಿದ್ದರು. ಭಾರತದಲ್ಲಿ ಕಾರ್ಮಿಕರಿಗೆ ಅತ್ಯುತ್ತಮ ತಾಂತ್ರಿಕ ತರಬೇತಿ ಯೋಜನೆಯನ್ನು ಸ್ಥಾಪಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು. "ಇದು ಯಂತ್ರದ ಯುಗ ಮತ್ತು ತಾಂತ್ರಿಕ ಹಾಗು ವೈಜಾನಿಕ ತರಬೇತಿಯು ಅತ್ಯುನ್ನತ ಮಟ್ಟಕ್ಕೇರಿದ ದೇಶಗಳು ಮಾತ್ರ ಹೋರಾಟದಲ್ಲಿ ಉಳಿದುಕೊಳ್ಳುತ್ತವೆ" ಎನ್ನುವುದು ಅವರ ಸಲಹೆಯಾಗಿತ್ತು. ಇದರಿಂದ ತಾಂತ್ರಿಕ ತರಬೇತಿ ಯೋಜನೆ ನಿರ್ವಹಿಸುವುದು ಮಾತ್ರವಲ್ಲದೆ ದೇಶದ ಶೈಕ್ಷಣಿಕ ವ್ಯವಸ್ಥೆಯ ಶಾಶ್ವತ ಭಾಗವಾಯಿತು. ಪ್ರಸ್ತುತ ಶೈಕ್ಷಣಿಕ ನೀತಿಯು ಸಹ ವೃತ್ತಿಪರ ಶಿಕ್ಷಣಕ್ಕೆ ಒತ್ತು ನೀಡುತ್ತದೆ.

ಬಂಡವಾಳಶಾಹಿಯು ಜನಸಾಮಾನ್ಯರನ್ನು ದೂರವಿಡುವ ವ್ಯವಸ್ಥೆಯೆಂದು ಕಾರ್ಲಮಾರ್ಕ್ಸ ಖಂಡಿಸಿದರು. ವಿಶ್ವದ ಮೊದಲ ಸಮಾಜವಾದಿ ರಾಷ್ಟ್ರವನ್ನು ಸ್ಥಾಪಿಸಿದ ಲೆನಿನವರು ಮೇ ದಿನಾಚರಣೆಯನ್ನು ಕುರಿತು ಹೇಳಿರುವ ಮಾತುಗಳು ಅತ್ಯಂತ ಮುಖ್ಯವಾಗಿವೆ. "ಕಾರ್ಮಿಕರು ತಮ್ಮ ದಿನನಿತ್ಯದ ಸಮಸ್ಯೆಗಳನ್ನು ಕುರಿತು ಚಿಂತಿಸಲು ಹಾಗೂ ಬೇಡಿಕೆಗಳನ್ನು ರೂಪಿಸಿ ಹೋರಾಡಲು ವರ್ಷಗಳೇ ಬೇಕಾಗುತ್ತವೆ ಆದರೆ, ವಿಶ್ವದಲ್ಲಿ ಬಂಡವಾಳಶಾಹಿಯು ನಡೆಸುತ್ತಿರುವ ಶೋಷಣೆ ಮತ್ತು ದಬ್ಬಾಳಿಕೆಗಳನ್ನು ಅಂತ್ಯಗೊಳಿಸಿ ಶೋಷಣಾರಹಿತ ಸರಿಸಮಾನತೆಯ ಸಮಾಜವಾದಿ ಸಮಾಜದ ನಿರ್ಮಾಣಕ್ಕಾಗಿ ನಡೆಸಬೇಕಾದ ಹೋರಾಟಗಳ ಬಗ್ಗೆ ಹಾಗೂ ಮಾಡಬೇಕಾದ ಯೋಜನೆಗಳ ಬಗ್ಗೆ ಚಿಂತನೆ ಮಾಡಲು ಹಾಗೂ ನಿರ್ಣಯಗಳನ್ನು ಕೈಗೊಳ್ಳಲು ಈ ದಿನವನ್ನು ಮೀಸಲಾಗಿಡಬೇಕು". ಎಲ್ಲ ದೇಶಗಳ 'ಕಾರ್ಮಿಕರೇ ಒಂದಾಗಿರಿ, ಒಂದಾಗಿರಿ ವಿಶ್ವದ ಕಾರ್ಮಿಕರೇ ಒಂದಾಗಿರಿ,' ಇದು ಮೇ ದಿನಾಚರಣೆಯ ಘೋಷಣೆ.

ಕಾರ್ಮಿಕರ ಕಲ್ಯಾಣವು ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ. ಕಾರ್ಮಿಕರ ಕಲ್ಯಾಣ ಕಾರ್ಮಿಕರ ಆರೋಗ್ಯ ಮತ್ತು ಆರ್ಥಿಕ ಸ್ಥಿತಿಯನ್ನು ಅವಲಂಬಿಸಿದೆ. ಆದ್ದರಿಂದ ಗಂಡು ಹೆಣ್ಣು ಎಂಬ ತಾರತಮ್ಯ ನಿಲ್ಲಿಸಿ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ವೇತನವನ್ನು ಪ್ರಸ್ತುತ ಸನ್ನಿವೇಶಕ್ಕೆ ನಿರ್ಧರಿಸಬೇಕು ಈ ಅಂಶವು ಕಾರ್ಮಿಕರ ಕಾರ್ಯಕ್ಷಮತ ಉತ್ಪಾದಕತೆ ಮೇಲೆ ಧನಾತ್ಮಕ ಪರಿಣಾಮ ಉಂಟುಮಾಡುತ್ತದೆ, ಕಾರ್ಮಿಕರ ಕಾರ್ಯಕ್ಷೇತ್ರದಲ್ಲಿ ರಾಜಕೀಯ, ಬೆದರಿಸುವಿಕೆ ಕಿರುಕುಳ, ಕಳಪೆ ಸಂವಹನ ದೀರ್ಘಾವಧಿ ಕೆಲಸ, ಅಸುರಕ್ಷಿತ ಕೆಲಸದ ಪರಿಸ್ಥಿತಿಗಳು ಕಳಪೆ ಸಂಬಂಧಗಳು ಹೆಚ್ಚಾಗಿರುವುದರಿಂದ ಕಾರ್ಮಿಕರು ಒತ್ತಡಗಳಿಗೆ ಸಿಲುಕಿದ್ದಾರೆ. ಅದರಿಂದ ಈ ಮೇಲಿನ ಅಂಶಗಳನ್ನು ತಡೆಗಟ್ಟುವುದಕ್ಕೆ ಸೂಕ್ತ ಕ್ರಮಗಳು ಜಾರಿಯಾಗಬೇಕಾಗಿದೆ. ಸರ್ಕಾರ ಮತ್ತು ಸಂಘ ಸಂಸ್ಥೆಗಳು ಹದಿಹರೆಯದವರಿಗೆ ಕೌಶಲವರ್ಧನ ತರಬೇತಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕಾಗಿದೆ. ಕಾರ್ಮಿಕರಿಗೆ ಸಮಯಕ್ಕೆ ಸರಿಯಾಗಿ ಸಂಪನ್ಮೂಲ ವ್ಯಕ್ತಿಗಳಿಂದ ಮಾರ್ಗದರ್ಶನ ಕೊಡಿಸಬೇಕು ವಿರಾಮಗಳನ್ನು ಪ್ರೋತ್ಸಾಹಿಸಬೇಕು ನಿಷ್ಠಾವಂತ ಉದ್ಯೋಗಿಗಳಿಗೆ ಬಹುಮಾನ ನೀಡಿ ಉದ್ಯೋಗಿ ಗುರುತಿಸುವಿಕೆಯ ಕಾರ್ಯಕ್ರಮವನ್ನು ಜಾರಿಗೊಳಿಸಿ ಮಾನಸಿಕ ಆರೋಗ್ಯ ಬೆಂಬಲವನ್ನು ನೀಡಿ ಕಾರ್ಮಿಕರ ಬಾಳಿಗೆ ಬೆಳಕಾಗುವುದು. ಕಾರ್ಮಿಕರಿಗೆ ಹಲವು ಯೋಜನೆಗಳು ಜಾರಿಯಲ್ಲಿದ್ದರೂ ಅನಕ್ಷರತೆ, ಅಜ್ಞಾನ ಮಾಹಿತಿಯ ಕೊರತೆ, ಭ್ರಷ್ಟಾಚಾರ, ಕಠಿಣ ನಿಯಮಗಳ ಮತ್ತು ಅಧಿಕಾರಿಗಳ ನಿರ್ಲಕ್ಷ ಧೋರಣೆಗಳ ಫಲವಾಗಿ ಕಾರ್ಮಿಕ ವರ್ಗಕ್ಕೆ ಮುಖ್ಯವಾಗಿ ಅಸಂಘಟಿತ ಕಾರ್ಮಿಕ ವರ್ಗಕ್ಕೆ ಯೋಜನೆಯು ಮರೀಚಿಕೆಯಾಗಿದೆ.

ಸರ್ಕಾರವು ಕಾರ್ಮಿಕರಿಗೆ ಉಚಿತ ಗೃಹಸಾಲ, ಮಕ್ಕಳಿಗೆವಿದ್ಯಾರ್ಥಿವೇತನ,ವಿವಾಹಕ್ಕೆಪ್ರೋತ್ಸಾಹಧನ ಕಾರ್ಮಿಕರ ಕಾರ್ಡ್ ಮೂಲಕ ಖಚಿತ ಆರೋಗ್ಯ ಸೇವೆ, ಆರ್ಥಿಕ ಸಹಾಯ ಪೂರೈಸುತ್ತಿದೆಯಾದರೂ ಪರಿಣಾಮಕಾರಿಯಾಗಿ ಜಾರಿಗೊಳಿಸಿ ಕಾರ್ಮಿಕರ ಜೀವನವನ್ನು ಕಿರುಕುಳ, ಅನಾರೋಗ್ಯ, ದೈಹಿಕ ಹಿಂಸೆ, ಕಡಿಮೆ ವೇತನ, ಬಾಲಕಾರ್ಮಿಕ ಪದ್ಧತಿ, ಜೀತಪದ್ಧತಿಗಳನ್ನು ದೂರವಾಗಿಸುವ ಕಾರ್ಯಕ್ಕೆ ನಾವೆಲ್ಲ ಕೈಜೋಡಿಸುವ ಸಮಯವಿದಾಗಿದೆ.

» **ಡಾ. ಜಗನ್ನಾಥ ಕೆ. ಡಾಂಗೆ, ಶಿಕ್ಷಣ ಪ್ರಾಧ್ಯಾಪಕರು ಕುವೆಂಪು ವಿಶ್ವವಿದ್ಯಾಲಯ.**

» **ಪ್ರಕಾಶ.ಸಿ.. ಸಂಶೋಧನಾರ್ಥಿ. ಶಿಕ್ಷಣ ಅಧ್ಯಯನ ವಿಭಾಗ ಕುವೆಂಪು ವಿಶ್ವವಿದ್ಯಾಲಯ**

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T